(SRI T. MARIAPPA)

in the exploratory stage. We are not sure we will get profit. We have to sink a lot of money to exploit ore and crush it and if the price of gold is good, we will make good. In the case of gold mining, it is a very speculative venture and risky. But it is money for those who are really bold and venturous. Success comes to those who dare and act an not to those who are timid.

Sri C. K. RAJAIAH SETTY.—Gold is international exchange. It earns dollars and it should be worked even if it is a loss.

Sri T. MARIAPPA.—Almost all the industries excepting a few are working well. We will have to be very careful while passing criticism. It is not that they should not bear the closest scrutiny. All that I say is-it is likely to create panic in the Stock Exchange. Therefore, I want to make it clear that these concerns are very stable, are all on solid foundation, and there need be no panic at all. After my reply, if there has been any misapprehension, it will have been removed and all members will have full confidence in the working of our companies. With regard to other industries and projects, the resolution is delightfully vague, as vague as heavens. If he wants to probe into the working of either the Tungabhadra or Bhadra or Nugu or other projects, he is at liberty to go there when the Public Accounts Committee or the Estimates Committee go there. Every Assembly member can go there and draw our attention to the lapses, if any. Therefore in a vague manner, let us not simply try to get a committee appointed for the sake of mere appointment. But I very earnestly request Sri Venkatai Gowda to read once again his own resolution, and he will see that it is very difficult to implement it in the manner he has suggested. The purpose is served by the debate he has initiated in the House. I request him to withdraw his resolution.

An HON'BLE MEMBER.—What about the amendment?

Mr. SPEAKER.—The amendent will have to be withdrawn and then the resolution.

Sri V. P. DEENADAYALU NAIDU.—The effect of the amendment is more or less in a way to remove that resolution. Therefore, I do not press the amendment at all.

The amendment was withdrawn by leave of the House.

Sri G. VENKATAI GOWDA.—In view of the assurance given that we are also allowed to probe into several matters, I beg leave of the House to withdraw the resolution.

The Resolution was, by leave, withdrawn.

Mr. SPEAKER.—The next resolution is in the name of Sri Dodmeti. He is not here. We will go to the third one.

No. 3—Declaring certain areas as Famine Areas

Sri K. KENCHAPPA (Hiriyur).—Sir, I beg to move:

"This Assembly is of the opinion that the Hiriyur, Challakere, Molakalmuru Taluks of Chitaldrug District, Pavagada, Sira, Madhugiri and Koratagere Taluks of Tumkur District and northern four taluks of Bijapur District be declared as famine areas in view of the prevailing distress conditions due to failure of timely rains."

Mr. SPEAKER.—Resolution moved:

"This Assembly is of the opinion that the Hiriyur, Challakere, Molakalmuru Taluks of Chitaldrug District, Pavagada, Sira, Madhugiri and Koratagere Taluks of Tumkur District and northern four taluks of Bijapur District be declared as famine areas in view of the prevailing distress conditions due to failure of timely rains."

ಶ್ರೀ ಕೆ. ಕೆಂಚಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳು, ತುಮಕೂರು ಜಿಲ್ಲೆಯ ಪಾವಗಡ, ಸಿರಾ, ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳು ಮತ್ತು ಬಿಜಾಪುರ ಜಿಲ್ಲೆಯ ಉತ್ತರದಲ್ಲಿರತಕ್ಕ ನಾಲ್ಕು ತಾಲ್ಲೂಕುಗಳಲ್ಲಿಯೂ ಈ ವರ್ಷದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಪ್ರವಾಸಮಾಡಿದ ಕಾಲದಲ್ಲಿ ತುಂಬ ಕಠಿಣ ಪರಿಸ್ಥಿತಿ ಇತ್ತು. ನಾನು ಮೊದಲು ಆಗಸ್ಟ್ ತಿಂಗಳಿನ 9, 10, 11ನೆಯ ತಾರೀಖುಗಳಲ್ಲಿ ಬಿಜಾಪುರ

ಜಿಲ್ಲೆಯ ಉತ್ತರ ತಾಲ್ಲೂಕುಗಳಲ್ಲಿ ಪ್ರವಾಸಮಾಡಿದಾಗ ಅಲ್ಲಿ ಮಳೆ ಇರಲಿಲ್ಲ, ಬೆಳೆಯುಂತೂ ಸ್ವಲ್ಪವೂ ಇರಲಿಲ್ಲ. ಈ ಕಾರಣದಿಂದಾಗಿ ನಾನು 19ನೆಯ ಸೆಪ್ಟೆಂಬರ್ 1958ರಲ್ಲಿ ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದೆ.

[Sri S. D. KOTHAVALE in the Chair.)

ಅದರಲ್ಲಿ ನಾನು ಚಿತ್ರದುರ್ಗ ಜಿಲ್ಲೆಯ ಪಕ್ಕದಲ್ಲಿರುವಂಥ ತುಮಕೂರು ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವಾರು ತಾಲ್ಲೂಕುಗಳಲ್ಲಿ ತುಂಬ ಕಠಿಣ ಪರಿಸ್ಥಿತಿ ಇದ್ದುದರಿಂದ ಸರ್ಕಾರಕ್ಕೆ ಕಾಗದವನ್ನು ಬರೆದು ಒಂದು ಕಾರ್ಯಕ್ರಮ ಪಟ್ಟಿಯನ್ನೂ ಕಳುಹಿಸಿ ಕೊಟ್ಟು, ಈ ತಾಲ್ಲೂಕುಗಳಲ್ಲಿ ನಾನು ಪ್ರವಾಸ ಮಾಡಬೇಕೆಂದಿದ್ದೇನೆ; ಇಲ್ಲಿ ಕಠಿಣ ಪರಿಸ್ಥಿತಿ ಇದೆ; ಇಲ್ಲಿ ಮಳೆ ಬಂದಿಲ್ಲ; ಕೆರೆಗಳಿಗೆ ನೀರು ಬಂದಿಲ್ಲ ಮತ್ತು ಬೆಳೆಯಾಗಿಲ್ಲ; ಈ ಸ್ಥಿತಿಯುಲ್ಲಿ ಜನರಿಗೆ ತುಂಬ ಕಷ್ಟವಿದೆ, ನಾಳೆ ದಿವಸ ಮತ್ತೆಯಾದರೂ ಇಲ್ಲಿ ಕ್ಲಿಷ್ಟಪರಿಸ್ಥಿತಿ ಇಲ್ಲ, ಬರಗಾಲದ ಪರಿಸ್ಥಿತಿ ಇಲ್ಲ ಎಂದು ಹೇಳಿದರೆ ತುಂಬ ತೊಂದರೆ ಯಾಗುತ್ತದೆ. ಆದ್ದರಿಂದ ಯಾರಾದರೂ ಮಂತ್ರಿಗಳು ಅಥವಾ ಸರ್ಕಾರದ ಅಧಿಕಾರಿಗಳು ನನ್ನ ಜೊತೆಗೆ ಬಂದು ಪರಿಸ್ಥಿತಿಯನ್ನು ನೋಡಬಹುದು ಅಥವಾ ಇದನು ಒಪ್ಪಿಕೊಳ್ಳಬೇಕು ಎಂದು 19ನೆಯ ಸೆಪ್ಟೆಂಬರ್ 1958ರಲ್ಲಿ ಒಂದು ಕಾಗದವನ್ನು ಸಹಿತ ಎಲ್ಲ ಮಂತ್ರಿಗಳಿಗೂ ಬರೆದಿರುವುದುಂಟು. ಅದರಲ್ಲಿ ಇಂಥಿಂಥ ತಾಲ್ಲೂಕುಗಳಲ್ಲಿ ಸಂಚಾರ ಮಾಡುತ್ತೇನೆಂದು ಖಚಿತವಾಗಿ ತಿಳಿಸಿ, ತಾವೇನಾದರೂ ಆ ಸ್ಥಳಗಳಲ್ಲಿ ಬರಗಾಲ ಇದೆ ಎಂದು ಒಪ್ಪಿಕೊಳ್ಳುವ ಪಕ್ಷಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ constructive propositions and suggestions ಎಂದು ಹೇಳುವ ಹಾಗೆ, ಸಲಹೆಗಳನ್ನು ಕೂಡ ಅದೇ ಕಾಗದದಲ್ಲಿ ವಿವರವಾಗಿ ಬರೆದಿದ್ದೇನೆ. ಅದರಲ್ಲಿ ನಾಮಾರು 14 ಅಂಶಗಳು ಇವೆ- ಎಲ್ಲೆಲ್ಲಿ ಕಷ್ಟ ಪರಿಸ್ಥಿತಿ ಇದೆಯೋ ಅಲ್ಲೆಲ್ಲ ಕಡಮೆ ಧಾರಣೆಯಲ್ಲಿ ಆಹಾರ ದಿನಸಿಗಳನ್ನು ಕೊಡಬೇಕು ಮತ್ತು ದನಗಳಿಗೆ ಆಹಾರ ವಿಲ್ಲದೆ ಇರುವುದರಿಂದ ಅವುಗಳಿಗೆ ಮೇವನ್ನು ಒದಗಿಸಲು ಡಿಪೋಗಳನ್ನು ತೆರೆಯ ಬೇಕು. ಈ ಪ್ರದೇಶಗಳಲ್ಲಿ ಬೇಕಾದಷ್ಟು ಕೆಲಸಗಳನ್ನು ಮಾಡಬೇಕಾಗಿದೆ. ಅವರಿಗೆ ಹೊಲ ಬೆಳೆಯುವೆ ಇದ್ದುದರಿಂದ ದನಗಳಿಗೆ ಮೇವಿಲ್ಲದೆ ಆಹಾರಾಭಾವವುಂಟಾಗಿದೆ. ಈ ಭಾಗಗಳಲ್ಲಿ ರಸ್ತೆಗಳನ್ನು ಮಾಡಬೇಕಾಗಿದೆ, wasteweir ಕಟ್ಟಬೇಕಾಗಿದೆ, bunds ಕಟ್ಟಬೇಕಾಗಿದೆ. ಅಲ್ಲಿರುವುವೆಲ್ಲ ಸಣ್ಣ ಕೆರೆಗಳು ದೊಡ್ಡ ಕೆರೆಗಳು ಯಾವುವೂ ಇಲ್ಲ ಅನೇಕ ಕೆರೆಗಳು ಹೂತು ಹೋಗಿವೆ. ಈ ಕೆಲಸಗಳನ್ನೆಲ್ಲ ಒಂದು ನಿಗದಿಯಾದ ಕಾರ್ಯಕ್ರಮದ ಪ್ರಕಾರ ತೆಗೆದುಕೊಂಡರೆ ಆ ಜನರಿಗೆ ಕ್ಲಿಷ್ಟ ಪರಿಸ್ಥಿತಿಯಲ್ಲದುದ್ದು ಒದಗಿದ ಹಾಗಾಗುತ್ತದೆ ಮತ್ತು ಕಾಳನ್ನು ಕೊಂಡುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಲ್ಲಿ ಜನ ಬಹಳ ಬೇನತ್ತು ಹೋಗಿದ್ದಾರೆ. ಅನೇಕ ಕಡೆ ರಸ್ತೆಗಳಲ್ಲ ಕಾಸ್‌ವೇಗಳಿಲ್ಲ, ಕಲ್ವರ್ಟ್‌ಗಳಿಲ್ಲ, ರಸ್ತೆಗಳು ಅರ್ಧಂಬರ್ಧವಾಗಿವೆ. ಇವುಗಳನ್ನೆಲ್ಲ ಸರ್ಕಾರದವರು ಮಾಡಬೇಕೆಂದು ಹವಿನ್ಯಾಕಲು ಕಲಮುಗಳನ್ನು ಸೂಚಿಸಿ ಬರಗಾಲದ ಪರಿಸ್ಥಿತಿ ಇರುವ ಕಡೆಗಳಲ್ಲಿ ಜನರಿಗೆ ಕೆಲಸಗಳು ಒದಗುವಂತೆ ಮಾಡುವುದರ ಜೊತೆಗೆ ಕಾಯಂ ಆಗಿ ವ್ಯವಸ್ಥೆ ಮಾಡುವುದರ ಮೂಲಕ ದೇಶಕ್ಕೆ ಸಂಪತ್ತಿನ ರೂಪದಲ್ಲಿ ಈ ಕಾರ್ಯಗಳು ನಿಂತು ಕೊಳ್ಳಬೇಕು ಆರೀತಿ ಸರ್ಕಾರದವರು ಮಾಡಬೇಕೆಂದು ನಾನು ಅವರಿಗೆ ಕಾಗದವನ್ನು ಬರೆದೆ. ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ವ್ಯವಸಾಯ ಮಂತ್ರಿಗಳು ಕೊಟ್ಟಿರುವ ಉತ್ತರ ಈ ರೀತಿ ಇದೆ, ಅದನ್ನು ನಾನು ಓದುತ್ತೇನೆ.

> "I am sorry I colud not acknowledge the receipt of your letter earlier as I was out of station. I am looking into the matter."

ಎಂದು ಅವರು ಒಂದು ಕಾಗದವನ್ನು ಬರೆದಿದ್ದಾರೆ. ಅನಂತರ ನನಗೆ ಒಂದು ಆಶ್ಚರ್ಯಕರವಾದ ಕಾಗದ ರೆವೆನ್ಯೂ ಮುಂತಿ ಗಳಿಂದ 10ನೆಯ ಅಕ್ಟೋಬರ್ 1958 ನೆಯ ದಿವಸ ಬಂದಿದೆ. ಅದರಲ್ಲಿ ಏನು ಬರೆದಿದ್ದಾರೆ ಎಂದರೆ; "ತಮ್ಮ ಕಾಗದ ಮುಟ್ಟಿದೆ. ಡೆಪ್ಯುಟಿ ಕಮಿಷನರು ಸ್ವತಿಯೊಂದು ಸ್ಥಳಗಳಿಗೂ ಹೋಗಿ ಬಂದಿದ್ದಾರೆ ಅವರು ಬೇಕಾದಂಥ ಕೆಲಸಗಳನ್ನು ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಭಾಗಗಳಲ್ಲಿರುವ ಜನರಿಗೆ ಕೆಲಸ ಕೊಡುವುವಕ್ಕೋಸ್ಕರ ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ಕೇಳಿಕೊಂಡಿದ್ದೇವೆ ಎಂದು ಬರೆದಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕೆಲಸ ಮಾಡುತ್ತಿದ್ದಾರೆ. ಕೆರೆಗಳ ರಿಪೇರಿಗೆ, ರಸ್ತೆಗಳನ್ನು ಮಾಡುವುದಕ್ಕೆ ನಮ್ಮ ಭಾಗಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು 900 ಪಲ್ಲ dehusked rice, ಎರಡನೆಯ ದರ್ಜೆ ಅಕ್ಕಿಯನ್ನು ಇಟ್ಟುಕೊಂಡಿದ್ದೇವೆ ಅದನ್ನು ಯಾರು ಬೇಕಾದರೂ ತಗೆದುಕೊಂಡು ಹೋಗಬಹುದು.

> "...The Deputy Commissioner can open fair price shops wherever necessary in the affected regions. Additional quota of rice can be allotted if there is any demand."

ಮುಂದಿನದು ಸ್ವಾಮಿ,

> "...According to latest report sent by the Deputy Commissioner, Chitradurga District, seasonal conditions in the District are generally fair. Standing crops are also reported to be fair throughout the district."

ಇಂಥ ಅಧಿಕಾರಿಗಳು ಸರ್ಕಾರಿ ನೌಕರರ ಲಿಸ್ಟಿನಲ್ಲಿ ಇರಬಾರದೆಂದು ಹೇಳುತ್ತೇನೆ. ನಾನು ಸರ್ಕಾರಕ್ಕೆ ಕಾಗದ ಬರೆದಾಗ ಮಂತ್ರಿಗಳಿಗೆ ಬರುವುದಕ್ಕೆ ಸಾಧ್ಯವಿಲ್ಲದ ಪಕ್ಷದಲ್ಲಿ ಬೇರೆ ಯಾರನ್ನಾದರೂ ಕಳುಹಿಸಿಕೊಡಿ ಎಂದು ಬರೆದಿದ್ದೇನೆ. ಅದರ ಮೇಲೆ ಪ್ರೋಗ್ರಾಂ ಲಿಸ್ಟ್ ಕೊಟ್ಟಿದ್ದೇನೆ. ಆ ಸ್ಥಳಗಳಿಗೆಲ್ಲ ಹೋಗಿದ್ದೇನೆ. ನನ್ನ ಕಾಗದದಲ್ಲಿ ಪ್ರತಿಯೊಂದನ್ನೂ ನಿಲಯಾಗಿ ಬರೆದಿದ್ದೇನೆ. ಈಗ ಅಲ್ಲಿ ಮಳೆ ಬಂದಿದ್ದರೂ ಸಹ ಅದರಿಂದ ಹೆಚ್ಚು ಉಪಯೋಗವೇನೂ ಆಗಿಲ್ಲ. ನಾನು ಕಾಗದವನ್ನು ಬರೆದದ್ದು 19ನೆಯ ಸೆಪ್ಟಂಬರ್ 1958ರಂದು. ಹತ್ತೊಂಭತ್ತನೆ ತಾರೀಖಿನ ನಂತರ ನಾನು ಹೇಳಿದಂಥ ಜಾಗಗಳಲ್ಲಿ ಮಳೆ ಬಂದರೂ ಸಹ ಬೆಳೆಯಾಗುವುವಿಲ್ಲ ವೆಂದು ನನ್ನ ಕಾಗದದಲ್ಲಿ ಬರೆದಿದ್ದೇನೆ. ಎಲ್ಲ ಕಡೆಯೂ ಮಳೆಬಂದರೂ ಹಿಂಗಾರು ಆಗದೆ ಇರುವ ಜಾಗಗಳು ಇರುತ್ತವೆ. ಅದಕ್ಕೋಸ್ಕರವೇ ಇಪ್ಪತ್ತನಯ ತಾರೀಖಿಗೆ ಇಂಥಿಂಥ ಜಾಗಗಳಿಗೆ ಹೋಗುತ್ತೇನೆ, ನೀವು ಯಾರಾದರೂ ಬನ್ನಿ ಎಂದು ಕಾಗದ ಬರೆದಿದ್ದೇನೆ.

(ಶ್ರೀ ಕೆ. ಕೆಂಚಪ್ಪ)

4-30 P.M.

ಆ ಜಾಗದಲ್ಲಿ ಮಳೆ ಬಂದದ್ದು ಉಂಟು. ಮಳೆ ಬಂದ ತಕ್ಷಣ ಬೆಳೆ ಆಗುತ್ತದೆಯೇ ಎಂದು ನಾನು ಕೇಳುತ್ತೇನೆ. ಈ ಜಾಗದಲ್ಲಿ ಬೆಳೆ ಆಗಿದೆ ಎಂದು ರಿಪೋರ್ಟು ಮಾಡಿದ ಅಧಿಕಾರಿಗಳನ್ನು ಸರ್ಕಾರಿ ನೌಕರರ ಲಿಸ್ಟಿನಲ್ಲಿಯೇ ಇಟ್ಟುಕೊಳ್ಳಬಾರದು. ನಾನು ನಂಕಟದಿಂದ ಹೇಳುತ್ತಿದ್ದೇನೆ. ಅಂಥ ಅಧಿಕಾರಿಗಳು ಸರ್ಕಾರಿ ನೌಕರಿಯಲ್ಲಿಯೇ ಇರಬಾರದು. ತಾವು ಅವರನ್ನು ನಂಬಿಕೊಂಡು ಹೀಗೆ ಹೇಳುತ್ತೀರಿ. ಪಾಪ, ವಾಂತಿ ಬೇರೆ ಇರುವಾಗ, ಸರ್ಕಾರಿ ಮಂತ್ರಿಗಳ ಮುಖಕ್ಕೆ ಮಸಿ ಬಳಿಯುವುದಕ್ಕೆ ಅವರು ಹೀಗೆ ಬರೆದಿದ್ದಾರೋ ಏನೋ ಎಂದು ನನಗೆ ಎನಿಸುತ್ತದೆ. ಇಂಥ ರಿಪೋರ್ಟುಗಳನ್ನು ಬರೆಯುವ ಹವ್ಯಾಸಕ್ಕೆ ಅವರು ಹೋಗಬಾರದಾಗಿತ್ತು. ನನ್ನಷ್ಟು ಕಾನ್ ಸ್ಟಿಟ್ಯೂಷನರ್ ಆಗಿ ಯಾರೂ ಕೆಲಸವನ್ನು ಮಾಡಲಕ್ಕೆ ಇಲ್ಲ. ಮುಂಚೆಯೇ ಕಾಗದ ಬರೆದು, ನಾನು ಖುದ್ದು ಹೋಗಿ ನೋಡಿ ಆ ಜಾಗದಲ್ಲಿ ಒಂದು ಕಾಳು ಹೈರೂ ಆಗಿಲ್ಲವೆಂದು ಹೇಳಿದರೆ, ಸರ್ಕಾರಿ ನೌಕರಿಯಲ್ಲಿರುವವರು ಸರ್ಕಾರಕ್ಕೆ ಬೇರೆ ತರಹ ತಿಳಿಸಿ, ಸರ್ಕಾರಕ್ಕೆ ಮಸಿ ಬಳಿದು, ಮಂತ್ರಿಗಳನ್ನು ಅಪಹಾಸ್ಯಕ್ಕೆ ಈಡು ಮಾಡುತ್ತಿದ್ದಾರೆ. ತಾವು ಎಚ್ಚರಿಕೆಯಿಂದ ಇರಬೇಕು. ತುಮಕೂರಿಗೆ 25 ಸಾವಿರ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದಿರಿ. ಸಿರಾ ತಾಲ್ಲೂಕು, ಪಾವಗಡ ತಾಲ್ಲೂಕು ಮತ್ತು ಮಧುಗಿರಿ ತಾಲ್ಲೂಕಿಗೂ ಕೊಟ್ಟಿದ್ದೀರಿ. ತಿಪಟೂರು ತಾಲ್ಲೂಕಿಗೂ ಕೊಟ್ಟಿದೆ ಎಂದು ಹೇಳುತ್ತಾರೆ. ಸಂತೋಷ. ನಾನು ಹೋಗಿ ನೋಡದೆ ಇರತಕ್ಕಂಥ ಒಂದು ಅಕ್ಷರವನ್ನೂ ಬರೆದಿಲ್ಲ. ನಾನು ಹೋದಂಥ ಸ್ಥಳದಲ್ಲಿ ಬರಗಾಲ ಇದೆಯೆಂದು ಹೇಳಿದ್ದೇನೆ. ಸೇಲಂ- ಬೆಳ್ಳಾರಿ ರೋಡಿಗೆ ಪೂರ್ವದಿಕ್ಕಿನಲ್ಲಿ ಮತ್ತು ಪಶ್ಚಿಮದಿಕ್ಕಿನಲ್ಲಿ ಬರಗಾಲ ತುಂಬ. ಮಂಡ್ಯದ ನಾಗಮಂಗಲ ತಾಲ್ಲೂಕಿನಲ್ಲಿ ಇದ್ದರೂ ಇರಬಹುದು ನಾನು ಹೋಗಿಲ್ಲ. ಕೋಲಾರ ಡಿಸ್ಟ್ರಿಕ್ಟ್ ನಲ್ಲಿ ಬಹಳ ಕಷ್ಟ ಪರಿಸ್ಥಿತಿ ಇದೆಯೆಂದು ನಾನು ಅನೇಕರಿಂದ ಕೇಳಿದ್ದೇನೆ. ಹಾಗೆ ಇರುವಾಗ 25 ಸಾವಿರ ರೂಪಾಯಿ ಕೊಟ್ಟರೆ ಏನು ಕೆಲಸ ಮಾಡಬಲ್ಲರು! 1945ನೆಯ ಇಸವಿಯಲ್ಲಿ ಮೈಸೂರಿನಲ್ಲಿ ಆಗ ಇದ್ದ ಬೇಜವಾಬ್ದಾರಿ ಸರ್ಕಾರ ಒಂದೊಂದು ತಾಲ್ಲೂಕಿಗೆ ಎಷ್ಟೆಷ್ಟು ಖರ್ಚು ಮಾಡಿತ್ತೋ, ಅಷ್ಟನ್ನು ಖರ್ಚು ಮಾಡಿ ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಈಗಿನ ಸರ್ಕಾರ ಹಿಂಜರಿಯುತ್ತದೆ. ಈಗಿರುವ ಜವಾಬ್ದಾರಿ ಸರ್ಕಾರ ಪ್ರಜೆಗಳದು, ಮತ್ತು ಪ್ರಜೆಗಳಿಗೋಸ್ಕರವಾಗಿರುವುದು. ಪ್ರಜೆಗಳಿಂದ ಚುನಾಯಿತರಾದ ಮಂತ್ರಿಗಳು ರಾಜ್ಯಭಾರಮಾಡುತ್ತಾ ಇದ್ದಾರೆ. ಇವರುಗಳು ನಮಾಜವಾದಿಗಳು ಅದರಲ್ಲಿಯೂ ಕಾಂಗ್ರೆಸ್ಸಿನ ಮತ್ತು ಗಾಂಧಿ ತತ್ವಕ್ಕೆ ಅನುಸಾರವಾಗಿರುವ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡಬೇಕೆಂಬ ಉದ್ದೇಶವುಳ್ಳವರು. ಇಂಥವರು 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಎಷ್ಟರಮಟ್ಟಿಗೆ ಬರಗಾಲ ಪರಿಸ್ಥಿತಿಯನ್ನು ಎದುರಿಸಬಲ್ಲರು! ಮುಂದಕ್ಕೆ ಹೋದರೆ, ಇನ್ನೊಂದು ವಿಚಿತ್ರ. ಸೆಪ್ಟೆಂಬರ್ ತಿಂಗಳಿನಲ್ಲಿ ಆ ನಾಲ್ಕು ಉತ್ತರ ಜಿಲ್ಲೆಗಳಲ್ಲಿ, ಡಿಸ್ಟ್ರಸ್ ಕಂಡಿಷನ್ ಇಲ್ಲದಿದ್ದರೆ, ಯಾವ ಬೆಳೆ ಇತ್ತು? ಅಲ್ಲಿ ಪ್ರತಿಯೊಂದು ತಾಲ್ಲೂಕಿಗೂ ನಾನು ಹೋಗಿದ್ದೆ. ಶ್ರೀ ಚನ್ನಬಸಪ್ಪನವರೂ ಆಗ ಅಲ್ಲಿ ತಿರುಗುತ್ತಾ ಇದ್ದರು. ಅಲ್ಲಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರೂ ಇದ್ದರು. ತಾವೂ ಇದ್ದಿರೋ ಏನೋ. ನಾನು ತಮ್ಮನ್ನು ಕೇಳುತ್ತೇನೆ, ಸೆಪ್ಟೆಂಬರ್ ತಿಂಗಳಿನಲ್ಲಿ ಯಾವ ಬೆಳೆ ಇರುತ್ತದೆ? ಯಾವುದಾದರೂ ಬೆಳೆ ಇರಬೇಕಲ್ಲ ಯಾವ ಬೆಳೆ ಇತ್ತು? ಇಂಚನ ಗೆರೆಗೆ ಹೋಗಿದ್ದೇನೆ. That is the border of Belgaum District. ಅಲ್ಲಿಯವರೆಗೆ ಹೋಗಿ ನೋಡಿದ್ದೇನೆ. ನಿಜವಾಗಿಯೂ ಬೆಳೆ ಏನೂ ಕಾಣಲಿಲ್ಲ. ಅಂದಮೇಲೆ ತಾವು ಹೊಸದಾಗಿ ಏನು ಕಂಡಿದ್ದೀರಿ! ತಮಗೆ ಬಂದ ರಿಪೋರ್ಟಿನಲ್ಲಿ ಏನು ಬೆಳೆ ಇತ್ತು ಎಂದು ಬರೆದಿದ್ದಾರೆ. ಇಲ್ಲದೆ ಇರುವುದನ್ನು ಬರೆಯುವ ಸರ್ಕಾರಿ ನೌಕರರನ್ನು ತಮ್ಮ ಲಿಸ್ಟಿನಲ್ಲಿ ಇಟ್ಟುಕೊಂಡರೆ ನಿಮಗೆ ಖಂಡಿತವಾಗಿಯೂ ಕೀರ್ತಿ ಬರುವುದಿಲ್ಲ. ಆವಾಗ ಇದ್ದುದು ಸೆಪ್ಟೆಂಬರ್ ತಿಂಗಳು. ನಾವೂ ನೀವೂ ಒಕ್ಕಲಿಗರು; ಒಕ್ಕಲಿಗ ಮನೆತನಕ್ಕೆ ಸೇರಿದವರು. ಸೆಪ್ಟೆಂಬರ್ ತಿಂಗಳಿನಲ್ಲಿ ಇಲ್ಲದ ಬೆಳೆ ಇತ್ತೀಚೆಗೆ ಯಾವುದಿರಬಹುದು! ಆವಾಗ ಮುಂಗಾರು ಬೆಳೆ ಮಾತ್ರ ಇರಬೇಕು. ಸೆಪ್ಟೆಂಬರ್ ತಿಂಗಳನಂತರ ಹಿಂಗಾರು ಬೆಳೆ ಬೆಳೆಯತಕ್ಕಂಥ ಕಾಲ. ಸೆಪ್ಟೆಂಬರ್ ಕಾಲದನಂತರ ಇಲ್ಲದ ಭಾಗದಲ್ಲಿ, ಹಿಂಗಾರು ಬೆಳೆ ಬೆಳೆದಿಲ್ಲ. ಅದು ಮುಂಗಾರು ಬೆಳೆ ಇರಬೇಕು. ಇದು ಬಹಳ relevant point.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಇರಾಖೆಯ ಮಂತ್ರಿಗಳು).—ಬಿಜಾಪುರದಲ್ಲಿ ಈಗ ಖಾರೀಫ್ ಕ್ಯಾಪ್ ಹಾರ್ವೆಸ್ಟ್ ಆಗುತ್ತಾ ಇದೆ.

ಶ್ರೀ ಕೆ. ಕೆಂಚಪ್ಪ.—ಇಂಚನಗೆರೆಗೆ ಹೋಗಿದ್ದೇನೆ. ಅದರ ಆಚೆಗೆ ಹೋಗಿದ್ದೇನೆ. ಯಾವ ಬೆಳೆ ಇತ್ತು? ಚಳ್ಳಕೆರೆ ತಾಲ್ಲೂಕಿನಲ್ಲಿ ಯಾವನಾದರೂ ಒಬ್ಬ ಮನುಷ್ಯ, ಮೂರು ಎಕರೆ ಜಮೀನಿನಲ್ಲಿ ಹೈರು ಬೆಳೆಯುವ ಕಡೆ, ಭಾವಿಯಿಂದ ನೀರೆತ್ತಿ ಅರ್ಧ ಎಕರೆಯಲ್ಲಿ ರಾಗಿ ಬೆಳೆದರೆ, ಅಲ್ಲಿಗೆ ಪೂರ್ತಿ ಬೆಳೆಯಾಗಿದೆ, ಬರಗಾಲವಿಲ್ಲವೆನ್ನುವುದೇ! ಮೊಂಡುತನಕ್ಕೆ ಯಾರಿಂದಲೂ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ಕೆರೆ ಭಾವಿಯಲ್ಲಿ ಆಕಸ್ಮಾತ್ತಾಗಿ ಸ್ವಲ್ಪ ನೀರೆತ್ತಿಕೊಂಡು ಬೆಳೆದು ಬಿಟ್ಟರೆ, ತಾಲ್ಲೂಕಿನಲ್ಲೆಲ್ಲಾ ಬೆಳೆದು ಬಿಟ್ಟಿದ್ದಾರೆ ಎಂದು ಹೇಳಬಹುದೇ! ಇದು ಒಂದು ರಾಜಿಕ್ಕೇ, ರೀನನ್ನೇ, ರೈಮೇ! ಇದಕ್ಕೂ ಎಲ್ಲೆ ಇದೆ. ತಾವು ಹಾಗೆ ಹೇಳಬಾರದು. ಇದು ಆದನಂತರ, ನಮ್ಮ ಮುಖ್ಯ ಮಂತ್ರಿಗಳು ಬಿಜಾಪುರ ಡಿಸ್ಟ್ರಿಕ್ಟಿಗೆ ಹೋಗಿದ್ದಾರೆ. ಅವರು ಕಷ್ಟವಿದೆ ಎಂದು ಒಪ್ಪಿಕೊಂಡು, ಸಾಧ್ಯವಾದಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರು ಹೇಳಿರುವುದನ್ನು ವೃತ್ತ ಪತ್ರಿಕೆಯಲ್ಲಿ ಸಾರಿ ಹೇಳಿದ್ದಾರೆ. ಉತ್ತಮ ಸ್ಥಿತಿ ಇದೆ ಎಂದು ತಮಗೆ ಒಂದು ಕಾಗದ ಬಂದಿದೆ ಏನು?

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—Point of order, Sir. ಈಗ ನಮ್ಮ ಮುಂದಿರುವ ಖಾನಗಿ ರೆಸಲ್ಯೂಷ್ಷ ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟದ್ದು. ಈಗ ಭಾಷಣ ಮಾಡುವಾಗ, ಬಿಜಾಪುರ, ಬೆಳಗಾಂ ಪ್ರದೇಶಗಳ ಪರಿಸ್ಥಿತಿಗಳನ್ನು ತೆಗೆದುಕೊಂಡು ಮಾತನಾಡುವುದು ಸರಿಯೇ!

Mr. CHAIRMAN (Sri S. D. Kothavale).–The Hon'ble member should read the resolution. It says from northern taluks of Bijapur District. So, there is no point of order.

ಶ್ರೀ ಕೆ. ಕೆಂಚಪ್ಪ.—ನಾನು ರಾಯರು. ಇದುವರೆಗೆ ಇಕೆಲಪೆನ್ಸಿಗೆ ಹೋಗಿಲ್ಲ. ಈಗ ಮಾತನಾಡುವಾಗಲೂ, ರೆಸಲ್ಯೂಷನ್ ಬಿಟ್ಟು ಒಂದು ಇಂಚೂ

ಅತಿಕ್ರಮಿಸಿ ಹೋಗಿಲ್ಲ. ನನ್ನ ಕಾಲವನ್ನು ತೆಗೆದು ಕೊಳ್ಳಬಾರದು. ನಾನು ಹೇಳುವುದಕ್ಕೆ ಸ್ವಲ್ಪ ಬೆಲೆ ಕೊಡಬೇಕು.

10ನೆಯ ಅಕ್ಟೋಬರ್ 1958ರಲ್ಲಿ ಒಂದು ಕಾಗದ ಬರೆದಿದ್ದೇನೆ. ಆ ಕಾಗದಕ್ಕೆ ಉತ್ತರವಾಗಿ,

> "So far as Bijapur District is concerned, there is not prevailing any distress condition."

ದುರ್ಭಿಕ್ಷ ಪರಿಸ್ಥಿತಿಯಿದೆ, ನೂಕ್ತ ಕ್ರಮ ಕೈಗೊಳ್ಳಿ ಎಂದು ಬರೆದರೆ ಅದಕ್ಕೆ ನಲಹೆಕೊಡಿ ಎಂದು ನನಗೆ ಬರೆದಿದ್ದಾರೆ. ಈ ನಕಲಿಕಾಣಿತದಿಂದ, ಮಾಕ್ ಎರೆಕ್ಷನ್‌ನಲ್ಲಿ ನಡೆಯುವಂತೆ ಮಾಕ್ ಅಟೆಮ್ಪ್ಟ್ ಮಾಡುವುದರಿಂದ ಜನರಿಗಿರುವ ಕಷ್ಟ ನಿವಾರಣೆಯಾಗುವುದಿಲ್ಲ. ನವೆಂಬರ್ 13ರಲ್ಲಿ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಇಲಾಖೆಯಿಂದ ಈ ರೀತಿಯ ಒಂದು ಕಾಗದ ನನಗೆ ಬಂದಿದೆ:—"I invite your reference to my D.O. letter, dated 10th October 1958 regarding the question of development of famine and scarcity areas by adopting special measures. I shall be grateful if you can send your suggestions early in the matter." ಈ ನಕಲಿಕಾಣಿತ ಎಷ್ಟು ದಿವಸ ನಡೆಯುವುದು! ಪ್ರತಿಯೊಬ್ಬ ಮಂತ್ರಿಗಳಿಗೂ ಪರಿಸ್ಥಿತಿ ಹೀಗೆ ಇದೆ, ಹೀಗೆ ಮಾಡಬೇಕು ಎಂದು ಬರೆದೆ. ಆದರೆ ಏನು ಮಾಡಬೇಕು ಎಂದು ಕೇಳುತ್ತಾ, ಕಾಗದದ ಓಡಾಟದಲ್ಲೇ ಕಾಲ ಕಳೆದು ವರ್ಷ ಮುಗಿಯುವ ಹವ್ಯಾಸದಲ್ಲಿದ್ದಾರೆ. ನಾನು ಹೇಳಿರುವ ತಾಲ್ಲೂಕುಗಳಲ್ಲಿ ತುಂಬ ಕಷ್ಟ ಪರಿಸ್ಥಿತಿಯಿದೆ. ನಾನು ಬರೆಯುವಾಗ ಪದಗಳನ್ನು ತುಂಬ ಯೋಚನೆಮಾಡಿ ಹಾಕಿದ್ದೇನೆ. ದುರ್ಭಿಕ್ಷ ಪರಿಸ್ಥಿತಿ ಇರುವುದರಿಂದ ದುರ್ಭಿಕ್ಷ ಪ್ರದೇಶಗಳೆಂದು ಸಾರಬೇಕೆಂದು ಸೂಚಿಸಿದ್ದೇನೆ. ಅಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಿರುವುದರಿಂದ ದುರ್ಭಿಕ್ಷ ಪ್ರದೇಶವೆಂದು ಘೋಷಣೆ ಮಾಡದಿದ್ದರೆ ಅದು ಕಾನೂನು ಪ್ರಕಾರ ದುರ್ಭಿಕ್ಷ ಪ್ರದೇಶವಾಗುವುದೇ ಇಲ್ಲ. ಇರುವ ತೊಂದರೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅಲ್ಲಿ ಮಳೆ ಬಂದಿಲ್ಲ. ಅದರಲ್ಲೂ ಹಿರಿಯೂರು ತಾಲ್ಲೂಕು ಧರ್ಮಪುರ ಹೋಬಳಿ ಮತ್ತು ಸೀರ್ಯ, ಪಾವಗಡ ತಾಲ್ಲೂಕುಗಳಲ್ಲಿ ಮಳೆ ಬಂದಿಲ್ಲ, ಬೆಳೆ ಆಗಿಲ್ಲ, ಕೆರೆಗಳಲ್ಲಿ ನೀರಿಲ್ಲ; ಅಲ್ಪಸ್ವಲ್ಪ ಬೆಳೆದಿರುವುದು ಅಲ್ಲಿರುವ ಬಾವಿಗಳ ಸಹಾಯದಿಂದ. ಅಲ್ಲಿ ವಿಪರೀತ ಬಾವಿಗಳಿವೆ, ಮೇಲೆಯೇ ನೀರು ಬೀಳುತ್ತದೆ. ಈಗ ಮಳೆಯಿಲ್ಲದೆ ನೀರು ತಳಕ್ಕೆ ಹೋಗಿದೆ, ಕಡಮೆಯಾಗಿದೆ. ಅಲ್ಲಿಗೆ ಖಾಯಂ ಪರಿಹಾರ ಕೊಡಬೇಕು, ಜಾಗ್ರತೆ ಎದ್ಯುಚ್ಛಕ್ತಿ ಒದಗಿಸಬೇಕು. ಹೀಗೆ ಸಹಾಯ ಮಾಡದಿದ್ದರೆ ಖಂಡಿತ ಸುಧಾರಣೆಯಾಗುವುದಿಲ್ಲ. ಅಲ್ಲಿ 1,200 ರೂಪಾಯಿಗಳಿಗಿಂತ ಹೆಚ್ಚಾಗಿ ಒಂದು ಎಚ್.ಪಿ.ಗೆ ಖರ್ಚಾಗಬಾರದು, ರಾತ್ರಿ ಪವರ್ ತೆಗೆದು ಕೊಳ್ಳಬೇಕು, ಶೇಕಡ 70ರಷ್ಟು ಕಂಪ್ಲೀಷನ್ ಸರ್ಟಿಫಿಕೇಟ್ ಬರಬೇಕು ಎಂದು ಹೇಳುವುದನ್ನು ಬದಿಗಿಟ್ಟು ಪವರ್ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ದಯವಿಟ್ಟು ನಿಮ್ಮ ಕಾನೂನನ್ನು ಬದಿಗಿಟ್ಟು ಬೆಂಗಳೂರು-ಸೇಲಂ-ಬಳ್ಳಾರಿ ರಸ್ತೆ, ಪೂರ್ವಕ್ಕೆ ಇರುವ ಎಲ್ಲಾ ಊರುಗಳಿಗೂ ವಿದ್ಯುಚ್ಛಕ್ತಿ ಕೊಡಲೇಬೇಕು. ಅಲ್ಲಿ ಸಣ್ಣ ಸಣ್ಣ ಕೆರೆಗಳು ಬೇಕಾದಷ್ಟಿವೆ. ಅವು ಹೂತು ಹೋಗಿವೆ. ಹೂಳು ತೆಗೆಯಲು ಕೊಟ್ಟಿರುವ ಹಣ ಎಲ್ಲಾ ಹಾಳಾಗುತ್ತಿದೆಯೆಂದು ಸರ್ಕಾರದವರೇ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ಈ ವರ್ಷ ಬೇಕಾದಷ್ಟು ಹಣಕೊಟ್ಟರೂ ಅಲ್ಲಿ ಇಂಜನಿಯರು ಯಾವ ಕೆಲಸ ವನ್ನೂ ಮಾಡುವುದಿಲ್ಲ. ಸರ್ಕಾರದವರು ಅವರಿಗೇನು ತಿಳುವಳಿಕೆ ಕೊಟ್ಟಿದ್ದಾರೋ, ಏನೋ, ಅಲ್ಲಿಗೆ ಹೋದ ಹಾಗೆ ಮಾಡಿ ವರ್ಗಮಾಡುವುದಕ್ಕೆ ಕೇಳಿಕೊಳ್ಳಿ ಎಂದು ಹೇಳಿದ್ದಾರೋ, ಏನೋ, ಈಗಲೂ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಬೇಕಾದರೆ ಸರ್ಕಾರಕ್ಕೆ ಬರೆಯಿರಿ ಎಂದು ಅಸಿಸ್ಟೆಂಟ್ ಇಂಜನಿಯರು ಹೇಳಿದ್ದಾರೆ. 1935ನೆಯ ಇನವಿಯಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಹೋಗಿ ತಮ್ಮ ನ್ಪಹನ್ಪದಿಂದ ಫೌಂಡೇಷನ್ ಸ್ಟೋನ್ ಹಾಕಿರುವ ಕೆರೆಯ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಸಣ್ಣ ಕೆರೆಯ ಕೆಲಸ ಮೊದಲು ತೆಗೆದುಕೊಳ್ಳಬೇಕು. ಕೆಲವುಕಡೆ ಹತ್ತರಿಂದ ಹದಿನೆಂಟು ಹದಗಳಷ್ಟು ಮಳೆ ಮಾತ್ರ ವರ್ಷಕ್ಕೆ ಬರುವುದು. ಚಳ್ಳಕೆರೆ ತಾಲ್ಲೂಕಿನಲ್ಲಿ ನರಾನರಿ ಮಳೆ ಆರರಿಂದ ಹತ್ತು ಅಂಗುಲ ಮಾತ್ರ. ಆದರೆ ದೇವರ ಕೃಪೆಯಿಂದ ಕೆಲವೆಡೆ ನೀರು ಮೇರೆ ಬೀಳುತ್ತದೆ. ಅಂಥ ಕಡೆಗೆ ವಿದ್ಯುಚ್ಛಕ್ತಿ ಕೊಡುವುದಿಲ್ಲ. ಅದನ್ನು ಬಿಟ್ಟು ಬೇರೆ ಕಡೆಗಳಿಗೆ ದೊಡ್ಡ ಕೆರೆಗಳಿಗಾಗಿ ಹಣ ಒದಗಿಸುತ್ತಾರೆ. ಇದು ಸೋಷಿಯಲಿಸ್ಟಿಕ್ ಪ್ಯಾಟ್ರ್ನ್. ಇಂಜನಿಯರುಗಳಿಗೆ "ನಂಬಿಳ ತಿನ್ನಿರಿ, ಒಂದೂ ಮಾಡಬೇಡಿ, ಅರ್ಜಿ ಬಂದರೂ ಪರವಾಗಿಲ್ಲ, ಕಾಪಾಡುತ್ತೇವೆ, ವರ್ಗವಾದರೂ ಮಾಡುತ್ತೇವೆ" ಎಂದೇನಾದರೂ ಹೇಳಿದ್ದೀರೋ! ಹೀಗಾಗಿ ಅಂದಾಜುಗಳು ಮೂಲೆಗಳಲ್ಲಿ ಬಿದ್ದು ಕೊಳೆಯುತ್ತಿವೆ. ಇದನ್ನು ತನಿಖೆಮಾಡಿ. ಇಂಜನಿಯರುಗಳು ತಮಗೆ ವಹಿಸಿರುವ ಮೈನರ್ ಇರಿಗೇಷನ್ ಪ್ರಾಜೆಕ್ಟುಗಳ ಕೆಲಸವನ್ನು ಮಾಡಿದ್ದಾರೆಯೆ, ಎಷ್ಟು ಮಾಡಿದ್ದಾರೆ, ಒಡೆದುಹೋಗಿರುವ ಪಿಕಪ್ ಮುಟ್ಟದಿರುವುದೆಷ್ಟು ಎಂಬುದನ್ನು ವಿಚಾರಿಸಬೇಕು. ಏರಿ ಅಭಿವೃದ್ಧಿ ಮಾಡುವುದಕ್ಕೆ, ಕಲ್ಲು ಕಳಚಿರುವುದನ್ನು ತೆಗೆದು ಬೇರೆ ಹಾಕುವುದಕ್ಕೆ 500 ರೂಪಾಯಿಗಳು ಸಾಲುವುದಿಲ್ಲ. ಇದನ್ನೆಲ್ಲಾ ಆಲೋಚನೆಬೇಕು. ನಿಮಗೇನು ಪ್ರಪೋಸಲ್ ಬೇಕೋ, ಕಂನ್ಸ್ಟ್ರಕ್ಟಿವ್ ಸಜೆಷ್ಟಬೇಕೋ ಅದೆಲ್ಲಾ ತಮ್ಮ ಹತ್ತಿರವೇ ಇದೆ. ಈ ದೃಷ್ಟಿಯಿಂದ ದಯಮಾಡಿ ನಿರ್ಣಯದಲ್ಲಿ ನಮೂದಿಸಿರುವ ತಾಲ್ಲೂಕುಗಳನ್ನು ಬರಗಾಲದ ಪರಿಸ್ಥಿತಿಯಿರುವ ತಾಲ್ಲೂಕುಗಳೆಂದು ಸಾರಬೇಕು. ಚಿತ್ರದುರ್ಗ ಜಿಲ್ಲೆಯೆಲ್ಲವನ್ನೂ ದುರ್ಭಿಕ್ಷ ಪ್ರದೇಶವೆಂದು ಸಾರಲೇಬೇಕು. ಹರಿಹರ ಮುಂತಾದ ಕಡೆ ಸಾಧಾರಣವಾಗಿ ಬೆಳೆಯಾಗಿದೆ. ಆದ್ದರಿಂದ ಆ ಭಾಗಗಳನ್ನು ಅಭಾವ ಪ್ರದೇಶಗಳೆಂದು ಸಾರಬೇಕಾಗಿಲ್ಲ. ನಾನು ನಮೂದಿಸಿರುವ ತಾಲ್ಲೂಕುಗಳಲ್ಲಿ ಮಳೆಯಿಲ್ಲ. ಜಮಂಗಲ ಹೋಬಳಿಯಲ್ಲಿ ಬೆಳೆಯಾಗಿದೆಯೆಂದು ಹೇಳಬಹುದು. Except in some dlaces, except the portion of Kasaba Hobli in Challakere Taluk and some other portion all other areas in these taluks are barren this year. ಈ ತಾಲ್ಲೂಕುಗಳಲ್ಲಿ ದುರ್ಭಿಕ್ಷ ವಿದೆಯೆಂದು ಬರೆದರೆ ಬರಗಾಲ ಪರಿಸ್ಥಿತಿಯಿಲ್ಲವೆಂದು ಸುಮ್ಮನಿರುವ ಅಧಿಕಾರಿಗಳು ಪಬ್ಲಿಕ್ ಸರ್ವೆಂಟ್ಸ್. ಅವರನ್ನು ಸರ್ಕಾರ ಪೋಷಣೆ ಮಾಡಲೇಬೇಕು. ಈ ತಾಲ್ಲೂಕುಗಳನ್ನೆಲ್ಲಾ ಬರಗಾಲ ತಾಲ್ಲೂಕುಗಳೆಂದು ಸಾರಲಕ್ಕೇಬೇಕು. ಇಷ್ಟೇ ಎಂದು ಹೇಳುವುದಿಲ್ಲ. ಬೇರೆಕಡೆ ನಾನು ನೋಡದಿರುವ ತಾಲ್ಲೂಕುಗಳೂ ಇರಬಹುದು. ಅವನ್ನೂ ನೋಡಿ ಸೇರಿಸುವುದು ಕರ್ತವ್ಯವಾಗಿದೆ. ಎಷ್ಟು ಟ್ರಾಕ್ಟರುಗಳನ್ನು ಕೊಟ್ಟಿದ್ದಾ

(ಶ್ರೀ ಕೆ. ಕೆಂಚಪ್ಪ)

ರೆಂದು ಹೇಳುವುದಕ್ಕೆ ತಯಾರಾಗಿಲ್ಲ. ಇದನ್ನೆಲ್ಲಾ ಹೇಳಿದ್ದಾಗಿದೆ. ಸೋಷಿಯಲ್ ವೆಲ್‌ಫೇರ್ ಸೆಂಟರಿ ನಿಂದ ಆಹಾರ ಸಮಸ್ಯೆ ಎಷ್ಟು ನಿವಾರಣೆಯಾಗಿದೆ? ಸೋಷಿಯಲ್ ವೆಲ್‌ಫೇರ್ ಆಫೀಸಿನಲ್ಲಿ ನೇಮಕ ಮಾತ್ರ ಮಾಡುತ್ತಾರೆ. ಕಿದರೆ ಅವರಿಗೆ ಬೇರೆ ಏನೂ ಕೆಲಸವಿಲ್ಲ. ಹಿಂದೊಮ್ಮೆ ಹಣಕಾಸಿನ ಮಂತ್ರಿಗಳು ಹೇಳಿದುದು ಏನೆಂದರೆ "Success goes to them who dare and act." ಆದರೆ ಈರೀತಿ ಆತ್ಮಸಾಕ್ಷಿಯಾಗಿ ಕೆಲಸಮಾಡುವ ಧೈರ್ಯವಿರಬೇಕು. ಈಗ ಏನಾಗಿದೆ ಎಂದರೆ ಕಾಂಗ್ರೆಸ್ ರಾಜ್ಯದಲ್ಲಿ ಕೆಲವು ಗುಂಪಿನ ಜನರಿಗೆ success ಹೋಗುತ್ತಿದೆ. ಆದುದರಿಂದ ಅದು ನಿಜ. ಯಾರಾದರೂ dare and act ಮಾಡುವುದಾದರೆ ಮೂರೂ ಬಿಟ್ಟು act ಮಾಡಬಹುದು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಮೂರೂ ಬಿಟ್ಟುಂಥವರಿಗೆ ಬೇರೆ ಜಾಗಾ ಇದೆ.

ಶ್ರೀ ಕೆ. ಕೆಂಚಪ್ಪ.—ಈ ಬಗ್ಗೆ ಹೆಚ್ಚಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಸ್ವೇಚ್ಛೆಯಾಗಿ ನಡೆಕೊಳ್ಳುತ್ತಾರೆ ಎಂಬುದು ಸತ್ಯವಾಗಿದೆ. ನಾನೂ ಸಹ ನಿಮ್ಮ ಜೊತೆಗೆ ಬರುತ್ತೇನೆ. ನಾವೂ ನೀವೂ ಕೂಡಿ ಒಂದೊಂದು ಸ್ಥಳಕ್ಕೆ ಹೋಗಿ ತಿರುಗಾಡಿ ಬರೋಣ. ಬರಗಾಲ ಪರಿಸ್ಥಿತಿ ಯಾವ ರೀತಿಯಾಗಿದೆ ಎಂಬುದನ್ನು ಪ್ರತ್ಯಕ್ಷವಾಗಿ ನೋಡೋಣ. ಬರಗಾಲ ಪರಿಸ್ಥಿತಿ ಇದ್ದ ಕಡೆಗಳಲ್ಲಿ ಸಾಕಷ್ಟು ಕೆಲಸ ತೆಗೆದುಕೊಳ್ಳಬೇಕು. ರಸ್ತೆ ಮಾಡುತ್ತೇವೆಂದು ನುಮ್ಮನೆ ಮಣ್ಣು ತೆಗೆದುಹಾಕುವ ಕೆಲಸವಲ್ಲ. ಯಾವದಾದರೂ ಒಂದು ನಿರ್ದಿಷ್ಟವಾದ ಕೆಲಸವನ್ನು ತೆಗೆದುಕೊಳ್ಳಬೇಕು. ನಾನು ಹೇಳುವುದೇನೆಂದರೆ, ಈ ನಕಲಿ ಕುಣಿತ ಬೇಡ. ಅವಶ್ಯವಿರುವ ಅಂಕಿಅಂಶಗಳು ನಮ್ಮ ಹತ್ತಿರ ಇವೆ. ಬೇಕಾದ ಸಾಹಿತ್ಯವಿದೆ. Now we are in the grip of facts. ನಕಲಿಕುಣಿತ ಬೇಡವೆಂದು ನಾನು ಹೇಳುತ್ತೇನೆ. ಯಾವ ಕೆಲಸ ಮಾಡಬೇಕು ಎಂಬುದನ್ನು ನೋಡಿ, ಮಾಡತಕ್ಕ ಕೆಲಸ ಖಾಯಂ ಸ್ವರೂಪದ್ದಾಗಿ ಉಳಿಯುವ ಹಾಗೆ ಇರಬೇಕು. ಬರಗಾಲದಲ್ಲಿ ಆಗತಕ್ಕ ರಸ್ತೆ ಕೆಲಸ ರಿಲೀಫ್ ವರ್ಕ್ ಎಂದು ಆಗುವುದು ಬೇಡ. ಯಾವದನ್ನು ಮಾಡಿದರೂ ಅದನ್ನು ಖಾಯಂ ಕೆಲಸಮಾಡಿಸಬೇಕು. ಎಲ್ಲಿ ಯಾವಾಗ ಬರಗಾಲ ಬರುತ್ತದೆ ಎಂಬುದು ಗೊತ್ತಾಗುವುದಿಲ್ಲ, ಅವಕಾಶ ಮೊದಲು ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು. ಸಣ್ಣಸಣ್ಣ ಕೆರೆಗಳ ದುರಸ್ತಿ ಮಾಡಿಸಬೇಕು. ಹೊಸದಾಗಿ ಸಣ್ಣಸಣ್ಣ ಕೆರೆಗಳನ್ನು ಕಟ್ಟಿಸಬೇಕು. ಭಾವಿ ತೆಗೆಯುವುದಕ್ಕಾಗಿ ಇನ್ನೂ ಹೆಚ್ಚಿಗೆ ನಬ್‌ಸಿಡಿ ಕೊಡಬೇಕು. ಮಲೆನಾಡು ಪ್ರದೇಶಕ್ಕೆ ಮಲೆನಾಡು ಅಭಿವೃದ್ಧಿ ಇಲಾಖೆ ಮಾಡಿದ ಹಾಗೆ ಬೈಲು ನಾಡಿಗೂ ಸಹ ಅದೇರೀತಿಯಲ್ಲಿ ಒಂದು ಇಲಾಖೆಯನ್ನು ಮಾಡಬೇಕು. ಬೈಲು ನಾಡಿನಲ್ಲಿ ಜನಸಂಖ್ಯೆ ಹೆಚ್ಚಾಗಿ ಜನರು ನಿರುದ್ಯೋಗಿಗಳಾಗಿದ್ದಾರೆ. ಈ ಬೈಲುನಾಡು ಸಹ ನಮ್ಮ ರಾಷ್ಟ್ರದ ಒಂದು ಭಾಗವಾಗಿದೆ. ನಿಜವಾಗಿಯೂ socialistic patternಮೇಲೆ ಕೆಲಸ ಮಾಡಬೇಕು. ಮಾಡುವುದನ್ನು ಜಾಗ್ರತೆ ಮಾಡಬೇಕು. ಕಾಲವಿಳಂಬ ಮಾಡಿದರೆ ಮಳೆಗಾಲ ಬಂದುಬಿಡುತ್ತದೆ. ಜೂನ್ ತಿಂಗಳಿನಲ್ಲಿ ಮಳೆಯಾಗುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ಬೆಳೆ ಬರುತ್ತದೆ. ಆದುದರಿಂದ ಇಂದಿನಿಂದ ಹಿಡಿದು ಮುಂದಿನ ಅಕ್ಟೋಬರ್ ತಿಂಗಳಿನವರೆಗೆ ರಿಲೀಫ್ ವರ್ಕ್ ತೆಗೆದುಕೊಳ್ಳಬೇಕು. ಬರಗಾಲದ ಪರಿಸ್ಥಿತಿಯು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಕೆಲಸ ತೆಗೆದುಕೊಳ್ಳಬೇಕೆಂದು ಈ ನಿರ್ಣಯದ ಮೂಲಕ ನಾನು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಎಸ್. ನಾರಾಯಣಸ್ವಾಮಿ (ಮುಳಬಾಗಲ್).—ಮಾನ್ಯ ಅಧ್ಯಕ್ಷರೆ, ಈ ಮೂಲ ನಿರ್ಣಯಕ್ಕೆ ನನ್ನ ಈ ತಿದ್ದುಪಡಿಯನ್ನು ಸೂಚಿಸುತ್ತೇನೆ. ಈ ತಿದ್ದುಪಡಿಯು ಈ ರೀತಿಯಾಗಿದೆ: "ದುರ್ಭಿಕ್ಷ ಪ್ರದೇಶಗಳೆಂಬುದಾಗಿ ಪ್ರಕಟಿಸಬೇಕೆಂದು" ಎಂಬ ಪದಗಳಾದ ನಂತರ "ಮತ್ತು ನಕಾಲಕ್ಕೆ ಮಳೆ ಬೀಳದೆ ಹೋಗುವ ಪ್ರಯುಕ್ತ ಈ ಪ್ರದೇಶಗಳು ಆಗಾಗ್ಗೆ ದುರ್ಭಿಕ್ಷಕ್ಕೆ ಗುರಿಯಾಗುವ ಕಾರಣ ಕೋಲಾರ ಡಿಸ್ಟ್ರಿಕ್ಟ್ ಸೇರಿ ಈ ಎಲ್ಲ ಪ್ರದೇಶಗಳಲ್ಲೂ ಖಾಯಂ ಆಗಿ ಕಷ್ಟನಿವಾರಣೆ ಯಾಗುವಂತೆ ಮಾಡುವುದಕ್ಕಾಗಿ, ಈಗಿರತಕ್ಕ 'ಮಲೆನಾಡು ಅಭಿವೃದ್ಧಿಯ ಬೋರ್ಡಿ'ನ ರೀತಿಯಲ್ಲಿ ಒಂದು 'ಬೋರ್ಡು' ಮಂಡಲಯನ್ನು ನೇಮಕ ಮಾಡಬೇಕೆಂದೂ" ಎಂಬ ಪದಗಳನ್ನು ಸೇರಿಸಬೇಕು.

Mr. CHAIRMAN.—Amendment moved:

> "After the words "Failure of timely rainfall" add "and that a Board on the lines of the present Malnad Development Board be set up to effect permanent relief in all these areas including the district of Kolar as these areas are the victims of frequent drought due to failure of rains."

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಸ್ವಾಮಿ, ಈ ಮೂಲ ನಿರ್ಣಯದ ವಿಚಾರದಲ್ಲಿ ಮಾನ್ಯಮಿತ್ರರು ಬಹಳ ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದ್ದಾರೆ. ನನ್ನ ತಿದ್ದುಪಡಿಯು ಸಹ ಅದಕ್ಕೆ ಅನುಗುಣವಾಗಿಯೇ ಇದೆ. ಈ ಮೂಲ ನಿರ್ಣಯದಲ್ಲಿ ಕೋಲಾರ ಜಿಲ್ಲೆಯನ್ನು ಸೇರಿಸಿಲ್ಲ, ಅದನ್ನು ಸೇರಿಸಿದರೆ ಈ ನಿರ್ಣಯವು ಸಮರ್ಪಕವೂ ನಷ್ಟವೂ ಆಗುತ್ತದೆ. ಈ ತಿದ್ದುಪಡಿಯು ಸಾಧುವಾದುದು ಆಗಿದೆ. ಅದಕ್ಕೆ ಕಾರಣವೂ ಅನಿವಾರ್ಯವಾಗಿದೆ. ಮೊದಲಿನಿಂದಲೂ ಕೋಲಾರ ಜಿಲ್ಲೆಯು ದುರ್ಭಿಕ್ಷ ಪ್ರದೇಶವಾಗಿದೆ. ಈ ವಿಷಯವನ್ನು ಅನೇಕಸಲ ಸರಕಾರದ ಗಮನಕ್ಕೆ ತಂದಿದ್ದೇವೆ. ಕೋಲಾರ ಜಿಲ್ಲೆಯು ಅಭಾವ ಪ್ರದೇಶವಾಗಿದೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ.

5 P.M.

ಈ ಅಭಾವವನ್ನು ನಿವಾರಣೆ ಮಾಡತಕ್ಕ ದಾರಿಯಲ್ಲಿ ಸರ್ಕಾರ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲವಲ್ಲಾ ಎಂದು ಈ ನಿರ್ಣಯವನ್ನು ಮುಂದಿಡಲಾಗಿದೆ. ಕೋಲಾರ ಜಿಲ್ಲೆಯಲ್ಲಿರತಕ್ಕ ಪ್ರಜಾ ಕೋಟಿಯಲ್ಲಿ ಶೇಕಡ 80 ಭಾಗ ಜನ ವ್ಯವಸಾಯದಿಂದ ಜೀವನ ಮಾಡುವವರಾಗಿದ್ದಾರೆ. ಕೋಲಾರ ಜಿಲ್ಲೆಯವರು ಸ್ವಾವಲಂಬಿಗಳಲ್ಲ. ಅಲ್ಲಿ ಯಾವ ನದಿಗಳಾಗಲ, ಉಪನದಿಗಳಾಗಲ ಇಲ್ಲ. ಕೇವಲ ಪ್ರಕೃತಿಯ ಆಶ್ರಯದಿಂದ ಜೀವನ ಮಾಡುವುದಕ್ಕಾಗಿದೆ. ಪ್ರಕೃತಿಯ ಪರಿಸ್ಥಿತಿ ಅಲ್ಲಿ ಬಹಳ ವಿಪರೀತವಾಗಿದೆ. ಅಲ್ಲಿನ ಪ್ರಜೆಗಳು ಪ್ರಕೃತಿಯ ವಿಕೋಪಕ್ಕೆ ಸಿಕ್ಕಿನರಳುತ್ತಿದ್ದಾರೆ. ಏನಾದರೂ ನಮ್ಮ ಮೇಲೆ ಸ್ನೇಹ ಬೆಳೆದಿದ್ದರೆ ಅಥವಾ ಪ್ರೀತಿ ಬೆಳೆದಿದ್ದರೆ ಅದು ರೈತನ ವಿಷಯವಾಗಿ

ಅಲ್ಲ. ರೈತರಿಗೆ ಈ ರೀತಿಯಾದ ಕಷ್ಟಗಳು ಪದೇ ಪದೇ ಪ್ರಾಪ್ತವಾಗುತ್ತಾ ಇದೆ. ಸರ್ಕಾರದವರಿಗೆ ಈ ವಿಚಾರದಲ್ಲಿ ಬೇಕಾದಷ್ಟು ಆತಂಕಗಳೇನೋ ಇವೆ; ಆದರೆ ಅವನ್ನು ಕಡೆಗೆ ಹಾಕಬೇಕಾದ್ದು ಅತ್ಯವಶ್ಯಕ ಎಂದು ಕಾಣುತ್ತದೆ. ನಮ್ಮ ಜನಗಳಿಗೆ ವ್ಯವಸಾಯ ವನ್ನು ಬಿಟ್ಟರೆ ಜೀವನಕ್ಕೆ ಬೇರೆ ಯಾವ ಮಾರ್ಗಗಳೂ ಇಲ್ಲ. ನಮ್ಮಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇಲ್ಲ. ಪದೇ ಕೋಲಾರ ಜಿಲ್ಲೆ ಎಂದರೆ ಚಿನ್ನದಗಣಿ ಒಂದನ್ನೇ ಗಮನದಲ್ಲಿಟ್ಟುಕೊಂಡರೆ ಪ್ರಯೋಜನವಿಲ್ಲ. ಜಿಲ್ಲೆಯ ಎಲ್ಲ ಭಾಗದ ಜನರೂ ಗಣಿಯಲ್ಲೇ ಕೆಲಸ ಮಾಡಿ ಜೀವನ ಮಾಡುತ್ತಿಲ್ಲ. ಅದೂ ಅಲ್ಲದೆ ಕೋಲಾರದ ಚಿನ್ನದ ಗಣಿಯ ಕೊಲಗಾರರೆಲ್ಲಾ ತಮಿಳುನಾಡಿ ನಿಂದ ಬಂದಿರತಕ್ಕವರು ನಮ್ಮ ಜನ ಬಹಳ ಕಡಮೆ ಇದ್ದಾರೆ. ಎಂಪ ಮೇಲೆ ಕೋಲಾರದಲ್ಲಿ ಚಿನ್ನದ ಗಣಿ ಇದ್ದ ಮಾತ್ರಕ್ಕೆ ಜಿಲ್ಲೆಯ ಎಲ್ಲಾ ಜನರಿಗೂ ಸೌಕರ್ಯ ವಾಗಿದೆ ಎಂದು ಹೇಳಲಕ್ಕೆ ಆಗುವುದಿಲ್ಲ. ಚಿನ್ನದ ಗಣಿಯ ಉಪಯೋಗವನ್ನು ದೇಶಾದ್ಯಂತ ಎಲ್ಲರೂ ಪಡೆಯುತ್ತಿದ್ದಾರೆ. ಅದನ್ನು ಬಿಟ್ಟರೆ ಇನ್ನು ಯಾವ ವಿಧವಾದ ಕೈಗಾರಿಕೆಗಳೂ ನಮ್ಮ ಜಿಲ್ಲೆಯಲ್ಲಿ ಇಲ್ಲ. ಆದ್ದರಿಂದ ರೈತರಿಗೆ ವ್ಯವಸಾಯವೇ ಮುಖ್ಯ ಕಸುಬಾ ಗಿದೆ. ಅಂತಹ ವ್ಯವಸಾಯವನ್ನು ಮಾಡುವಾಗ ಪ್ರಕೃತಿ ಸೌಲಭ್ಯ ಕಡಮೆ ಇರುವ ಸ್ಥಳಗಳಿಗೆ ನೀರಾ ವರೀ ಸೌಕರ್ಯ ಒದಗಿಸಿಕೊಡದೇ ಇದ್ದರೆ ಗತ್ಯಂತರ ವೇ ಇಲ್ಲ. ಪ್ರಪಂಚದಲ್ಲಿ ಹುಟ್ಟಿ ಅದರಲ್ಲೂ ಅಂತಹ ಪ್ರದೇಶದಲ್ಲಿರುವ ದುರ್ದೈವಿ ಜೀವನ ಮಾಡುವ ಬಗೆ ಹೇಗೆ ಅಂತ ಹೇಳಿ ಎಂದು ಸದಾ ಪರಿತಪಿಸುತ್ತಾ ಇರುತ್ತಾನೆ, ಅಂತಹ ಒಂದು ಅಭಾವ ಪರಿಸ್ಥಿತಿ ಅಲ್ಲರುವುದು ಸರ್ಕಾರದವರಿಗೆ ಗೊತ್ತಿದೆ. ಈ ಅಭಾವ ವನ್ನು ಪರಿಹರಿಸಲು ತಕ್ಕ ಕಾರ್ಯಕ್ರಮ ಕೈಕೊಳ್ಳ ಬೇಕೆಂದು ಸರ್ಕಾರದವರಿಗೆ ಕೇಳಿಕೊಂಡು ಕ್ರಮ ಕೈಕೊಳ್ಳುತ್ತಾರೆಂದು ನಿರೀಕ್ಷಣೆ ಮಾಡಿದಾಗ್ಯೂ ಕೂಡ ಸರ್ಕಾರದವರಿಗೆ ದಯೆಬಂದಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮೈನರ್ ಇರಿಗೇ ಷನ್ಸಿಗೆ ಇಷ್ಟು ಕೊಡುತ್ತೇವೆ, ಲೆಸ್‌ನಬ್ಬಿಡಿ ಇಷ್ಟು ಕೊಡುತ್ತೇವೆ ಎಂದು ಹೇಳುತ್ತಾರೆ ನಿಜ. ಇದೆಲ್ಲಾ ಒಂದು ನೆಪದ ರೂಪದಲ್ಲಿ – ನಮ್ಮ ಸ್ನೇಹಿತರು ನಕಲು ಎಂದು ಹೇಳಿದರು–ನಕಲು ಎಂದು ಹೇಳಿದರೂ ತಪ್ಪಾಗ ವುದಿಲ್ಲ, ಕಳೆದ ಅಧಿವೇಶನದಲ್ಲಿ ಪ್ರಾರ್ಥನೆ ಮಾಡಿದೆ. ಸಣ್ಣ ಮತ್ತು ಹಿರಿಯ ಕೆರೆಗಳ ಕಾಂಗಾರಿಯನ್ನು ಎಷ್ಟೋ ಮಾಡಿಸಿದರೂ ಸಹ ಪ್ರಕೃತಿದತ್ತವಾದ ಮಳೆ ಬಾರದಿದ್ದರೆ ಕೆರೆಗಳಿಗೆ ನೀರು ತುಂಬುವುದಿಲ್ಲ. ಆದ್ದ ರಿಂದ ಪ್ರತಿಯೊಂದು ರೈತ ಕುಟುಂಬಕ್ಕೂ ಒಂದೊಂದು ನೀರಾವರೀ ಬಾವಿ ಇರುವಂತಹ ವ್ಯವಸ್ಥೆ ಮಾಡಿ ಅನುಕೂಲ ಮಾಡುವುದಾದರೆ ಅದರಿಂದ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ. ಅಂತಹ ಒಂದು ಕೆಲಸವನ್ನು ದಯವಿಟ್ಟು ಸರ್ಕಾರದವರು ಮಾಡಿಸ ಬೇಕೆಂದು ಈಗಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕೆ ಅಪಾರವಾದ ಹಣ ಬೇಕು ನಿಜ. ಅಷ್ಟು ಹಣ ಸೌಕರ್ಯವಿಲ್ಲದಿದ್ದರೆ ಹತ್ತು ಕೋಟಿ ರೂಪಾಯಿಗ ಳನ್ನು ಆ ಕೆಲಸಕ್ಕಾಗಿ ಸಾರ್ವಜನಿಕರಿಂದ ಪಡೆದು ರೈತ ನಿಗೆ ಸಾಲವಾಗಿ ಕೊಡಿ ಎಂದು ಆಗಲ್ಲೇ ಬೇಡಿದೆ, ಅದರ ಪರಿಣಾಮ ಏನಾಯಿತು? ಮಾನ್ಯ ಮಂತ್ರಿಗಳು ಹೇಳಿದರು ಈ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿ ಇದೆ, ಎಷ್ಟು ಬೇಕಾದರೂ ಕೊಡುತ್ತೇವೆ ಎಂದು. ಅಧಿವೇಶನ ವು ಗಿದ ಕೆಲವು ದಿವಸದಲೇ ಕೋಲಾರ ಜಿಲ್ಲೆಗೆ ಉದಾರವಾಗಿ 40 ಸಾವಿರ ರೂಪಾಯಿ ಗಳನ್ನು ಮಂಜೂರುಮಾಡಿದರು. ಇಡೀ ಜಿಲ್ಲೆಗೆ ಅಷ್ಟು ಕೊಟ್ಟರೆ ಯಾವ ರೀತಿ ಹಂಚಿಕೆ ಮಾಡಬೇಕು? ಯೋಚನೆ ಮಾಡಿ. ಇದು ನಕಲು ಅಲ್ಲದೆ ಬೇರೆ ಏನೆಂದು ಯೋಚನೆ ಮಾಡಲು ನನಗೆ ಗೊತ್ತಾಗಲಲ್ಲ. ಈ ರೀತಿ ಕಾರ್ಯಕ್ರಮದಿಂದ ನಮ್ಮ ಕಷ್ಟ ಪರಿಹಾರ ವಾಗುವುದಿಲ್ಲ ಸಮತೋಲವಾದ ಸಮಾಜವನ್ನು ಸ್ಥಾಪನೆ ಮಾಡಬೇಕೆಂದು ಒತ್ತಿ ಒತ್ತಿ ಹೇಳುತ್ತಾ ಇದ್ದೀರಿ. ಇವತ್ತು ಸಂಸ್ಥಾನದಲ್ಲಿನ ಒಂದು ಭಾಗದ ಜನ ಕಷ್ಟ ಪಡುತ್ತಾ ಇರುವಾಗ ಅವರನ್ನು ಇತರರ ಮಟ್ಟಕ್ಕೆ ತರಲು ಕ್ರಾಂತಿಕರವಾದ ಯಾವುದೇ ಕಾರ್ಯಕ್ರಮ ವನ್ನೇ ಆಗಲಿ ತಂದು ಅವರ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಪಡದಹೊರತು ಏನೂ ಪ್ರಯೋಜನವಿಲ್ಲ. ನೀವೇನೋ ಲರಾಜಾಲವಾಗಿ ಇಂಥ ಕಡೆಗೆ ಇಂತಿಷ್ಟು ಹಣ ಬಡ್ಜೆಟ್‌ನಲ್ಲಿ ಒದಗಿಸಿದ್ದೇವೆ ಎಂದು ಹೇಳುತ್ತೀರಿ. ಆದರೆ ಮೂಲದೋಷ ಪ್ರಕೃತಿಯಲ್ಲಿ ವ್ಯತ್ಯಾಸವಾದಾಗ ಅದನ್ನು ಅಭ್ಯಾಸ ಮಾಡಲಕ್ಕೆ ಜನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ. ಎಲ್ಲ ಕ್ಕಿಂತಲೂ ಪ್ರಾಮುಖ್ಯವಾದದ್ದು ವ್ಯವಸಾಯ ಕಸುಬು. ಈ ಮೂಲ ಕಸುಬನ್ನು ಬಿಟ್ಟು ನಗರಗಳಲ್ಲಿ ಉಪಕಸುಬು ಗಳನ್ನು ಕೈಕೊಳ್ಳಲು ಜನ ಹಾತೊರೆಯುತ್ತಿದ್ದಾರೆ. ಈ ಮೂಲ ಕಸುಬನ್ನೇ ಇತರ ಕೈಗಾರಿಕೆಗಳು ಅವಲಂ ಬಿಸಿವೆ. ಇದಕ್ಕೆ ಸರ್ಕಾರದ ಸಹಾಯವಿಲ್ಲದೇ ಹೋದ ಪಕ್ಷದಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆಯಲಕ್ಕಾಗಲಿ, ಕೈಗಾರಿಕೆಗಳನ್ನು ಪ್ರಾರಂಭ ಮಾಡಲಕ್ಕಾಗಲಿ ಆಗುವುದಿಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಕೋಲಾರ ಜಿಲ್ಲೆಯಲ್ಲಿ ಚಿನ್ನ ಒಂದೇ ಅಲ್ಲ ಇನ್ನು ಅನೇಕ ಕಡೆಗಳಲ್ಲಿ ಇತರ ಖನಿಜ ಸಂಪತ್ತು ಮೈಕಾ ವಗೈರೆ ದೊರೆಯುತ್ತವೆ ಎಂದು ಹೇಳಿದರು. ಅಂತಹ ಪ್ರಕೃತಿ ಸಂಪತ್ತನ್ನು ಉಪಯೋಗಮಾಡಿಕೊಂಡು ಅಲ್ಲರತಕ್ಕ ಜನಗಳಿಗೆ ಏಕೆ ಒಂದು ಉದ್ಯೋಗವನ್ನು ಒದಗಿಸಬಾರದು? ನಮ್ಮ ಜಿಲ್ಲೆಯವರ ಮೇಲೆ ಏಕೆ ನಿಮಗೆ ಕೋಪ ಎಂದು ಯೋಚನೆ ಮಾಡುತ್ತಾ ಇದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಕೋಪ ಏಕೆ! ಕೋಲಾರ ಜಿಲ್ಲೆಯವರ ಮೇಲೆ ನಮಗೆ ಬಹಳ ವಿಶ್ವಾಸ!

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸ್ವಾಮಿ. ಚಿನ್ನ ನಮ್ಮಲ್ಲಿ ಇರುವವರೆಗೂ ಬಹಳ ವಿಶ್ವಾಸ ಇಟ್ಟು ರುತ್ತೀರಿ. ಅಂಧ್ರದವರಿಗೆ ಬಿಟ್ಟುಕೊಡುವುದಿಲ್ಲ. ಚಿನ್ನದ ಗಣಿ ಇಲ್ಲದೇ ಇದ್ದಿದ್ದರೆ ಬೇರೆ ರೀತಿ ಇರುತ್ತಿತ್ತೋ ಏನೋ!

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಲೆಕ್ಚಾರ ಚಿನ್ನದ ಮೇಲೆ ಅವಲಂಬಿಸಿರುವುದಿಲ್ಲ, ಜನರ ಮೇಲೆ ಅವಲಂಬಿಸಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬಹಳ ಸಂತೋಷ. ನಿಜವಾಗಿಯೂ ನಿಮ್ಮದು ಅದೇ ಉದ್ದೇಶ ವಾಗಿದ್ದ ಪಕ್ಷದಲ್ಲಿ ಮೊದಲನೆ ಪಂಚವಾರ್ಷಿಕ ಯೋಜನೆ ಯಲ್ಲೇ ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಏನಾದರೂ ತೆಗೆದುಕೊಳ್ಳುತ್ತಾ ಇದಿರಿ. ಅದೂ ಹೋಗಲಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ಮಾಡಿದ್ದೀರಾ ಎಂದರೆ ಅದರಲ್ಲೂ ಇಲ್ಲ ಇನ್ನು ಮೂರನೆ ಯೋಜನೆಯನ್ನು ಕಾದು ನೋಡ ಬೇಕಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಎರಡನೆ ಪಂಚ ವಾರ್ಷಿಕ ಯೋಜನೆ ವಿಚಾರವಾಗಿ ಚರ್ಚೆ ಆದಾಗ ಮೊದಲನೆ ಪಂಚವಾರ್ಷಿಕ ಯೋಜನೆಯ ಪ್ರಕಾರ ಏನೇನು ಕಾರ್ಯಗತವಾಯಿತು ಎಂಬುದನ್ನು ಹೇಳಿದ್ದೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನಾನು ಬಹಳ ವಿಷಾದಪಡಬೇಕಾಗಿದೆ. ನಮ್ಮ ಮಂತ್ರಿಗಳೂ ಇದುವರೆಗೂ ನೋಡಿಲ್ಲ ಎಂದು ಕಾಣುತ್ತದೆ. ಕೋಲಾರದ ಜಿಲ್ಲೆಯಲ್ಲಿ ಏನೂ ಮಾಡಿಲ್ಲ. ಎಲ್ಲ ಸೌಕರ್ಯವಿರುತ್ತದೋ ಅಂತಹ ಕಡೆಗೆ ಇನ್ನಷ್ಟು ಸೌಕರ್ಯ ಮಾಡಿಕೊಡುತ್ತಾ ಇದ್ದೀರಿ! ಮಿಕ್ಕಕಡೆ ಇರತಕ್ಕ ಕಷ್ಟ ಪರಿಹಾರವಾಗಲಕ್ಕೆ ಯಾವ ಪ್ರಮಾಣದಲ್ಲಿ ವ್ಯವಸ್ಥೆ ಮಾಡಬೇಕೋ ಆ ಪ್ರಮಾಣದಲ್ಲಿ ಮಾಡಲು ಯೋಜನೆಯನ್ನು ಹಾಕಿಕೊಂಡಿಲ್ಲ. ಬೇರೆ ಜಿಲ್ಲೆಗಳಲ್ಲಿ ನೀರಾವರಿ ಬಾವಿಗಳು, ಕೆರೆಗಳ ರಿಪೇರಿ ಮಗ್ಗೈರೆ ಮಾಡಿಸುತ್ತ, ಇದ್ದೀರಿ, ಇಲ್ಲ ಎಂದು ಹೇಳುವುದಿಲ್ಲ. ನಮ್ಮ ಕಡೆ ಜನ ಮಳೆ ಬಾರದೆ ಕಂಗೆಟ್ಟಿದ್ದಾರೆ, ಜೀವನಕ್ಕೆ ಬೇರೆ ಮಾರ್ಗವಿಲ್ಲ. ಹೀಗಿರುವುದರಿಂದ ನಾವು ನಮ್ಮ ಜೀವನ ಸಾಗಿಸಿಕೊಳ್ಳಲಕ್ಕೆ ನಮಗೆ ಸೌಕರ್ಯ ಮಾಡಿಕೊಡಿ ಎಂದು ಕೇಳುತ್ತಾ ಇದ್ದೇವೆ. ಅನೇಕ ವೇಳೆ ಹೇಳಿದ್ದೇವೆ. ಕೋಲಾರ ಜಿಲ್ಲೆಯವರ ವಿಚಾರದಲ್ಲಿ ನಿಜವಾಗಿಯೂ ಇಲ್ಲಿ ಒಂದು ಮಾತು ಹೇಳಬೇಕಾದರೆ ಈ ವಿಷಯದಲ್ಲಿ ಬಹಳ ಅನುಮಾನ ವಿದೆ. ಇದನ್ನು ಹೊಗಲಾಡಿಸಬೇಕು. ನಾನು ಸ್ವತಃ ಹೇಳುತ್ತಾ ಇದ್ದೇನೆ. ಬೇಡಿಕೊಳ್ಳುತ್ತಾ ಇದ್ದೇನೆ. ನಮಗೆ ಶಾಶ್ವತವಾದ ಪರಿಹಾರ ಕಾರ್ಯವನ್ನು ಮಾಡಿ ಪರಿಹಾರ ಒದಗಿಸಿಕೊಡಿ. ದಿನೇ ದಿನೇ ಪ್ರಜಾ ಸಂಖ್ಯೆ ಬೆಳೆಯುತ್ತಾ ಇದೆ. ಜನರಿಗೆ ಉದ್ಯೋಗ ಕಲ್ಪನೆಗಾಗಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಎಂದು ಹೇಳುತ್ತಾ ಇದ್ದೇವೆ ಏನು ಮಾಡಿದ್ದೀರಿ? ವಿದ್ಯುಚ್ಛಕ್ತಿ ಬೇಕು ಎಂದು 1947ನೆಯ ಇಸವಿಯಿಂದ ಯಲ್ಲೂರಿನಿಂದ ಶ್ರೀನಿವಾಸಪುರಕ್ಕೆ ಒಂದು ಲೈನು ಕೇಳುತ್ತಿದ್ದೇವೆ. 12 ವರ್ಷಗಳಿಂದ ಅದು ಪೆಂಡಿಂಗ್ ಇದೆ. ಇವತ್ತು ಕೂಡ ಮಂಜೂರುಮಾಡಿಲ್ಲ. ಎಸ್ಟಿಮೇಟ್ ರಿವೈಸ್ ಆಗುತ್ತಾ ಇದೆ. ಶ್ರೀನಿವಾಸಪುರ—ಸೋಮಯಾಜುಲಪಲ್ಲ, ಶ್ರೀನಿವಾಸಪುರ—ದಳಸ್ಸೂರು ಇವುಗಳಿಗೂ ಕೂಡ ಎಸ್ಟಿಮೇಟ್ ಆಗಿದೆ. ಮಂಜೂರು ಆಗಿಲ್ಲ. ಎಷ್ಟು ಎಂದು ಕೇಳೋಣ! ಅದಕ್ಕೆ ನಾನು ಸರ್ಕಾರದವರಿಗೆ ಇಷ್ಟು ಮಾತ್ರ ಸಲಹೆ ಮಾಡುತ್ತಾ ಇದ್ದೇನೆ. ತಾವು ಮಾಡತಕ್ಕ ಕಾರ್ಯ ಶಾಶ್ವತವಾದ ಒಂದು ಪರಿಹಾರ ಒದಗಿಸಿಕೊಡುವಂತಹುದಾಗಿರ ಬೇಕು. ಆ ರೀತಿ ಮಾಡಲಕ್ಕೆ ಏನು ಕಾರ್ಯಕ್ರಮ ಕೈಕೊಂಡರೆ ಈ ಕಷ್ಟ ಪರಿಹಾರವಾಗುತ್ತದೆಯೋ ಅಂಥ ದನ್ನೆಲ್ಲ ಸೂಚನೆ ಮಾಡಲಾಗಿದೆ. ಈಗ ತಾವು ಮಲೆನಾಡು ಅಭಿವೃದ್ಧಿ ಬೋರ್ಡ್ ಎಂದು ಹೇಳಿ ಒಂದು ಬೋರ್ಡನ್ನು ರಚನೆ ಮಾಡಿದ್ದೀರಿ. ಅದೇ ರೀತಿ ಇದಕ್ಕೂ ಒಂದು ಬೋರ್ಡನ್ನು ರಚನೆಮಾಡಿ, ನಮಗಿರತಕ್ಕ ಎಲ್ಲಾ ಕಷ್ಟಗಳನ್ನೂ ತೆಗೆದುಕೊಂಡು, ಅವುಗಳನ್ನು ಪರಿಹಾರಮಾಡಿ; ಇನ್ನು ಕಾಲವಿಳಂಬ ಮಾಡಬೇಡಿ ಎಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ತಂದಿರುವ ಅಲ್ಪಸ್ವಲ್ಪ ತಿದ್ದುಪಡಿ ಬಹಳ ಸಾಧುವಾಗಿದೆ. ಮಾನ್ಯ ಮಿತ್ರರಾದ ಶ್ರೀ ಕೆಂಚಪ್ಪ ನವರೂ ಕೂಡ ಇದನ್ನು ಸ್ವಾಗತಿಸುತ್ತಾರೆ ಎಂದು ತಿಳಿದಿದ್ದೇನೆ. ಇಷ್ಟಾದಮೇಲೆ ಮಾನ್ಯ ಸಚಿವರಲ್ಲಿ ಒಂದೇ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇನ್ನು ಕಾಲವಿಳಂಬ ಮಾಡಬಾರದು, ಈ ತತ್ವವನ್ನು ಅಂಗೀಕಾರಮಾಡಿ ಒಂದು ಬೋರ್ಡನ್ನು ರಚಿಸಲು ಸರ್ಕಾರದವರು ಒಪ್ಪಿಗೆ ಕೊಡುತ್ತಾರೆ ಎಂದು ನಂಬಿ ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು). — ಸ್ವಾಮಿ, ಶ್ರೀ ಕೆಂಚಪ್ಪನವರು ತಂದಿರತಕ್ಕ ಈ ನಿರ್ಣಯ ಬಹಳ ಸಾಧುವಾಗಿದೆ. ತುಮಕೂರು ಜಿಲ್ಲೆಯಲ್ಲಿ ಅಭಾವ ಪ್ರದೇಶಗಳಾಗಿರತಕ್ಕ ನಾಲ್ಕು ತಾಲ್ಲೂಕುಗಳನ್ನು ಈ ನಿರ್ಣಯದಲ್ಲಿ ಸೇರಿಸಿದ್ದಾರೆ. ಅದಕ್ಕೋಸ್ಕರವಾಗಿ ಅವರನ್ನು ನಾವು ನಿಜವಾಗಿಯೂ ಅಭಿನಂದಿಸಲೇಬೇಕು. ನಮ್ಮ ಜಿಲ್ಲೆಯವರಾದ ಮತ್ತು ನಮ್ಮ ಸ್ನೇಹಿತರಾದ ಕ್ರೀಮುಕ್ಕಣ್ಣಪ್ಪ ವಗ್ಗೈರೆ ಯವರು ಇಂಥ ನಿರ್ಣಯವನ್ನು ತರದೇ ಇದ್ದರೂ ಚಿತ್ರದುರ್ಗ ಜಿಲ್ಲೆಯವರಾದ ಶ್ರೀ ಕೆಂಪ್ಪಚನವರು ಈ ನಿರ್ಣಯವನ್ನು ತಂದಿರುವುದರಿಂದ ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ.

ಎರಡನೆಯದಾಗಿ ಇದರಲ್ಲಿ ವಾಸ್ತವವಾಗಿಯೂ ನಾನೂ ಕೂಡ ಮಾನ್ಯ ಮಂತ್ರಿಗಳಿಗೆ ಕೊರಟಗೆರೆ ತಾಲ್ಲೂಕಿನ ವಿಚಾರದಲ್ಲಿ ಅಗಾಗ್ಗೆ ಕಾದಗಳನ್ನು ಬರೆದಿರುತ್ತೇನೆ. ಅದರ ಮೇಲೆ ಅವರು ಯಥಾ ಪ್ರಕಾರ ದಿವಿಜನರ್ ಕಮಿಷನರ್ ಅವರನ್ನು ಟೂರ್ ಮಾಡುವುದಕ್ಕೆ ಕಳುಹಿಸಿದ್ದಾರೆ. ಹೀಗೆ ಬಂದಂಥ ಅಧಿಕಾರಿಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆಂಬುದನ್ನು ಹೇಳಲು ತುಂಬ ದುಃಖವಾಗುತ್ತದೆ. ಅಧಿಕಾರಿಗಳು ಕಾರಿನಿಂದ ಈಚೆಗೆ ಇಳಿಯುವುದೇ ಇಲ್ಲ. ಕಾರಿನಲ್ಲಿ ಹೋಗುತ್ತ ಇರುವಾಗಲೇ ಸ್ಥಳದ ಅಧಿಕಾರಿಗಳು ಬೆಳೆ ಚೆನ್ನಾಗಿದೆ ಎಂದು ಹೇಳುತ್ತಾರೆ. ಆದರಮೇಲೆ ಇವರೂ ಸಹ ಸರ್ಕಾರಕ್ಕೆ ರಿಪೋರ್ಟ್ ಮಾಡುತ್ತಾರೆ. ಈ ರೀತಿಯಾಗಿ ನಡೆಯುತ್ತಿದೆ. ಮಾನ್ಯ ರೆವೆನ್ಯೂ ಮಂತ್ರಿಗಳು ಈ ಪ್ರದೇಶಕ್ಕೆ ಪರಿಹಾರ ಕಾರ್ಯಗಳಿಗಾಗಿ 25 ಸಾವಿರ ರೂಪಾಯಿಗಳನ್ನು ಕೊಟ್ಟರು. ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಸ್ವಲ್ಪ ಕಷ್ಟ ಪುಂಟಾಯಿತು. ಅಂಥ ಕಡೆಗಳಲ್ಲಿ ಈ ಹಣದಿಂದ ಸ್ವಲ್ಪ ಸಹಾಯ ದೊರಕುತ್ತಿದೆ. ಆದರೂ ಇಷ್ಟು ಸಾಲದು. ಈ ಪ್ರದೇಶದ ಹೋಬಳಿ ಮುಖ್ಯ ಸ್ಥಳಗಳಲ್ಲಿಯೂ ಒಂದೊಂದು ಆಹಾರ ಮಳಿಗೆಯನ್ನು ತೆರೆದು ಅವುಗಳನ್ನು ನಡೆಸಿದರೆ ಆ ಹೋಬಳಿಯ ಜನ ಗಳಿಗೆ ಆಹಾರ ಸಿಕ್ಕುತ್ತದೆ ಎಂದು ಯಾರಾದರೂ ನಂಬಿಕೊಂಡಿದ್ದರೆ ಅದು ಸರಿಯಲ್ಲ. ಇದರಿಂದ ಎಲ್ಲರಿಗೂ ಸಹಾಯ ಸಿಕ್ಕುತ್ತಿಲ್ಲ. ಇಲ್ಲ ಮಾಡತಕ್ಕ ಕೆಲಸಗಳು ಬೇಕಾದಷ್ಟಿವೆ. ನಮ್ಮ ಪ್ರಧಾನ ಮಂತ್ರಿ ಗಳಾಗಿರುವ ಪಂಡಿತ ಜವಹರಲಾಲ್ ನೆಹರೂ ಅವರು ಹಿಂದೆ ಸೀರ್ಯ, ಪಾವಗಡ, ಮಧುಗಿರಿ ಮತ್ತು ಅಲ್ಲಿಂದ ಮುಂದಕ್ಕೆ ಕೋಲಾರ ಜಿಲ್ಲೆಯೊಳಗೆ ಕೂಡ ಸಂಚಾರ ಮಾಡಿದಾಗ ಆ ಪ್ರಾಂತ್ಯದಲ್ಲಿ ಕ್ಷಾಮ ಬರದೆ ಇರತಕ್ಕ ರೀತಿಯಲ್ಲಿ ಏನಾದರೂ permanent relief measures ಮಾಡಬೇಕೆಂದು ಪತ್ರಿಕೆಗಳಲ್ಲಿ ಕೊಟ್ಟಿದ್ದ ಹೇಳಿಕೆಗಳನ್ನು ನಾನು ಓದಿದ್ದೇನೆ. ಈ ವಿಚಾರ ಮಾನ್ಯ ಸ್ನೇಹಿತರಿಗೂ ಮತ್ತು ಸರ್ಕಾರಕ್ಕೂ ಗೊತ್ತಿದೆ. ಆದರ ಮೇಲೆ ಏನೂ ಕಾರ್ಯಕ್ರಮ ತೆಗೆದುಕೊಂಡಹಾಗೆ ಕಂಡುಬರುವುದಿಲ್ಲ. ಈ ಪ್ರದೇಶಗಳಲ್ಲ ಖಾಯಂ ಪರಿಹಾರ ಕಾರ್ಯಗಳನ್ನು ತಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಕಾಗದವನ್ನು ಬರೆದರೆ ಅದರಿಂದ ಬಡ ಬೋರೇಗೌಡನ ದುಡ್ಡು ಸ್ವಲ್ಪ ಖರ್ಚಾಗುತ್ತಿದೆಯೇ ಹೊರತು ಕೆಲಸವೇನೂ ಆಗುತ್ತಿಲ್ಲ. ಈ ಅಧಿಕಾರಿ ಬಂದರು, ಆ ಅಧಿಕಾರಿ ಬಂದರು, ನೋಡಿಕೊಂಡು ಹೋದರು. ಅಧಿಕಾರಿಗಳ ಟಿ.ಎ. ಗಾಗಿ ಸ್ವಲ್ಪ ಹಣ ಖರ್ಚಾಗುತ್ತಿದೆ. ನಾವು

ಸರ್ಕಾರಕ್ಕೆ ಏನು ಕೆಲಸವಾಗಬೇಕೆಂದು ತಿಳಿಸುತ್ತೇವೆಯೋ ಅದು ಮಾತ್ರ ನೆರವೇರುತ್ತಿಲ್ಲವೆಂದು ನಂಕಟದಿಂದ ಹೇಳಬೇಕಾಗಿದೆ.

ಕೊರಟಗೆರೆ ತಾಲ್ಲೂಕು ಕೋಳಾಳ ಹೋಬಳಿಯಲ್ಲಿ 78 ಹಳ್ಳಿಗಳಿವೆ. ಅಲ್ಲಿ ಎರಡು ರಸ್ತೆಗಳನ್ನು ಬಿಟ್ಟರೆ ಬೇರೆ ರಸ್ತೆಗಳಿಲ್ಲ. ಒಂದೂರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ರಸ್ತೆಸೌಕರ್ಯವಿಲ್ಲ. ಈ ಹೋಬಳಿಯಲ್ಲಿ ಕಡಿಮೆಯಾಗಿ ಬೆಳೆಯುತ್ತಾರೆ. ಅದನ್ನು ತುಮಕೂರು ಮಾರ್ಕೆಟ್ಟಿಗೆ ಅಥವ ಬೇರೆ ಊರಿಗೆ ಮಾರಾಟಕ್ಕೆ ತೆಗೆದುಕೊಂಡು ಹೋಗಬೇಕಾದರೆ ನಾಲ್ಕು ಮೈಲಿ ದೂರದಲ್ಲಿರುವ ರಸ್ತೆಗೆ ಸಾಗಿಸಲು ಒಂದು ಮೂಟೆಗೆ ಎಂಟಾಣೆ ಬಾಡಿಗೆ ಕೊಡಬೇಕು.

ಕುಡಿಯುವ ನೀರಿನ ಬಾವಿಗಳಿಲ್ಲ. ಬಾವಿಗಳನ್ನು ಮಾಡಿಸಿ ಎಂದರೆ ಮಾಡಿಸಿಲ್ಲ. ಕೊರಟಗೆರೆ ತಾಲ್ಲೂಕಾಫೀಸಿನ ವಿಚಾರ ಹೇಳಲು ನನಗೇ ನಾಚಿಕೆಯಾಗುತ್ತದೆ. ಅಮಲ್ದಾರರನ್ನು ಬಾವಿ ಕೊಡಿ ಎಂದು ಕೇಳಿದರೆ ಅದಕ್ಕೆ ಅವರು ಗಮನ ಕೊಡುವಂತೆಯೇ ತೋರುವುದಿಲ್ಲ. ನಾನು ತಾಲ್ಲೂಕು ಅಮಲ್ದಾರರಿಗೆ ನಾಲ್ಕಾರು ಸಲ ಕಾಗದ ಬರೆದಿದ್ದೇನೆ. ಡೆಪ್ಯುಟಿ ಕಮಿಷನರಿಗೂ ಬರೆದಿದ್ದೇನೆ. ನೀರಿನ ಅಭಾವವನ್ನು ಮೊದಲು ತಪ್ಪಿಸಿ ನಂತರ ಇತರ ಕಾರ್ಯಗಳನ್ನು ಮಾಡಿ ಎಂದು ತಿಳಿಸಿದ್ದೇನೆ. ಸತ್ಯಾಂಶಗಳನ್ನು ಹೇಳುತ್ತಿದ್ದೇನೆ, ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಕೆರೆಗಳ ವಿಚಾರ ತೆಗೆದುಕೊಂಡರೆ ಅಳಲನದ್ರು ವೆಂಕಟಾಪುರದ ಕೆರೆಗೆ ಹತ್ತು ವರ್ಷಗಳಿಂದ ಕೆಲಸ ವಾಗಿಲ್ಲ ಈಗ ಎಸ್ಟಿಮೇಟ್ ಆಗಿ ಸರ್ಕಾರಕ್ಕೆ ಬಂದಿದೆ ಎಂದು ಕೇಳಿದ್ದೇನೆ. ಮಜ್ಜಿನಕುರಿಕೆ ಕೆರೆ 1928ರಲ್ಲಿ ಪ್ರಾರಂಭವಾದದ್ದಕ್ಕೆ sanction ಆಗಿದೆ ಎಂದು ಕೇಳಿದ್ದೇನೆ. ಮಂಜೂರಾಗಿರುವುದರ ಕೆಲಸ ನಡೆದು ಜನಗಳಿಗೆ ಸಹಾಯವಾದರೆ ಅದರಿಂದ ದೇಶಕ್ಕೆ ಒಳ್ಳೆಯದು. ಕೆಲಸ ಮಂಜೂರಾಗಿ ಇರುವುದಕ್ಕೆ ಬಂದಿದೆ ಎಂದು ಹೇಳಿದರೆ ಅದರಿಂದರೇ ಯಾರೂ ತೃಪ್ತಿಪಡುವುದಕ್ಕಾಗುವುದಿಲ್ಲ. ಮಾವತ್ತೂರು ಕರೆ ಒಂದು ದೊಡ್ಡ ಕೆರೆ. ಅದರ ಕೆಳಗೆ pick-ups ಹಾಕಿದರೆ ಬೇಕಾದಷ್ಟು ಜಮೀನಿಗೆ ನೀರು ಸಂಬರಾಜು ಆಗುತ್ತದೆ ಎಂದು ಜನಗಳು ಹೇಳಿದ್ದಾರೆ. ಇದನ್ನು ಮೈಸೂರ್ ಇರಿಗೇಷನ್ ಸ್ಕಿಂನಲ್ಲಿ ತೆಗೆದುಕೊಳ್ಳಿ ಎಂದು ತೆಗೆದುಕೊಳ್ಳುತ್ತಿಲ್ಲ. ಈ ಮಾನ್ಯ ಸಭೆಯಲ್ಲಿ ಹೇಳುವುದನ್ನು ನೋಡಿದರೆ ಎಷ್ಟು ಕೋಟಿ ರೂಪಾಯಿಗಳನ್ನು, ಖರ್ಚುಮಾಡುವುದಕ್ಕೆ ಏರ್ಪಾಟುಮಾಡಿದ್ದೇವೆಂದು ಹೇಳುತ್ತಾರೆ. ಪ್ರತಿಯೊಂದು ಪ್ರಶ್ನೆಗೆ, ಕೆರೆ, ಕುಂಟೆ, pickups ವಿಚಾರದ ಪ್ರಶ್ನೆಗಳು ಬಂದಂಥ ಕಾಲದಲ್ಲಿ ಯಾವುದನ್ನೇ ನೋಡಿದರೂ "It is under consideration" ಎಂದು ಹೇಳಿದ್ದಾರೆ, ಇದು ನನಗಂತೂ ಅರ್ಥವಾಗುತ್ತಿಲ್ಲ. ಎಷ್ಟು ವರ್ಷಕಾಲ ಹೀಗೆಯೇ 'under consideration' ಎಂದು ಹಾಕುತ್ತಾರೆ? ದಯವಿಟ್ಟು ಇದನ್ನು ಕಡಮೆಮಾಡಿ ಕೆಲಸಮಾಡಿ ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಹೆಚ್ಚು ಆಳವಾಗಿ ಬೆಳೆಯುವ ದೋಜನೆಯಲ್ಲಿ ಬಾವಿಗಳಿಗೆ 250 ರೂಪಾಯಿ ಸಬ್ಸಿಡಿಕೊಡುತ್ತೇವೆಂದು ಮಾಡಿದಾರೆ. ಕೊರಟಗೆರೆ, ಪಾವಗಡ, ಮಧುಗಿರಿ ತಾಲ್ಲೂಕುಗಳ ವಿಚಾರವೇ ಒಂದು ವೈಶಿಷ್ಟ್ಯ. ಬಾವಿಯನ್ನು ತೋಡಲು ನಾಲ್ಕಾರು ಸಾವಿರ ರೂಪಾಯಿ ಖರ್ಚುಮಾಡಿದರೆ, ಸರ್ಕಾರದಿಂದ ಕೊಡತಕ್ಕದ್ದು 250 ರೂಪಾಯಿ. ಇದು ಕೊಕ್ಕರ್ ಗ್ಯಾಂಟ್ ಎಂದು ಇಟ್ಟುಕೊಳ್ಳೋಣ. ಇದನ್ನಾದರೂ ಸರಿಯಾಗಿ ಕೊಡುತ್ತಾರೆಯೇ ಎಂದರೆ ಕೊಡುವುದಕ್ಕೆ ನಾಧ್ಯವಿಲ್ಲ. ಏಕೆಂದರೆ ರೈತನು ಬಾವಿಯನ್ನು ತೋಡಿದರೆ ಅದನ್ನು ನೋಡಿಕೊಂಡು ಬರಲು ಅಮಲ್ದಾರರು ಅಲ್ಲಗೆ ಹೋಗಬೇಕಾದರೆ ದಾರಿ ಇಲ್ಲವೆಂಬಕಾರಣ ಹೀಗಾಗಿ ಮೂರು ತಿಂಗಳು, ಆರು ತಿಂಗಳು, ಎಂಟು ತಿಂಗಳು ಮೇಲ್ಪಟ್ಟು ನಿಶ್ಚರ್ಥವಾಗದೆ ಉಳಿದಿರುವ ನಂದರ್ಭಗಳಿವೆ. ಕೆಲವು ನಂದರ್ಭಗಳಲ್ಲಿ ಬಾವಿ ತೋಡಿಸಿರುವ ಮೂರುನಾಲ್ಕು ಜನರ ಜಮೀನು ಹರಾಜಿಗೆ ಬಂದಂಥ ಸ್ಥಿತಿ ಇದೆ. ಈರೀತಿಯಾಗಿ ಹಣ ಖರ್ಚು ಮಾಡಿ ಬಾವಿಗಳನ್ನು ತೋಡಿಸಿದರೂ ಅದರ ನೀರನ್ನು ಮೇಲಕ್ಕೆತ್ತಿ ಉಪಯೋಗಿಸಿಕೊಳ್ಳಲು ಅವರಿಗೆ ವಿದ್ಯುಚ್ಛಕ್ತಿ ದೊರೆತಿಲ್ಲ.

ಇಲ್ಲಿ ಮಾಡತಕ್ಕ ಕಾರ್ಯಗಳು ಇನ್ನೂ ಇವೆ. ಅವಗಳನ್ನು ಸರಿಯಾಗಿ ಮಾಡುತ್ತಿಲ್ಲ, ಬೆಳೆ ಕೆಟ್ಟಿದೆ. ಜನರಿಗೆ ತೊಂದರೆಯಾಗಿದೆ ಎಂದರೆ ಅಧಿಕಾರಿಗಳು ಒಬ್ಬರಮೇಲೊಬ್ಬರು ಹೋಗಿ ಅವರಿಗೆ ಟಿ.ಎ. ಕೊಡುವುದೇ ಜಾಸ್ತಿಯಾಗುತ್ತಿದೆಯೇ ಹೊರತು ಜನಗಳಿಗೆ ಮಾತ್ರ ಏನೂ ಸಹಾಯವಾಗುತ್ತಿಲ್ಲ. ಮಾನ್ಯ ಸ್ನೇಹಿತರು ಸಭೆಯ ಮುಂದೆ ಒಂದು ನಿರ್ಣಯವನ್ನು ತಂದು ಕೆಲವು ಪ್ರದೇಶಗಳನ್ನು ಬರಗಾಲ ಪ್ರದೇಶಗಳೆಂದು ಕರೆಯಬೇಕೆಂದು ಹೇಳಿರುವುದು ನಿಜವಾಗಿಯೂ ಒಪ್ಪತಕ್ಕ ಮಾತು. ಎರಡು ಮೂರು ತಿಂಗಳ ಹಿಂದೆ emergency relief works ಕೈಕೊಳ್ಳುವ ನಂಬಂಧದಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿ, ಅದರ ಮೀಟಿಂಗನ್ನು ಕರೆದಿದ್ದರು. ನಾವುಗಳೆಲ್ಲ ಬೆಳಿಗ್ಗೆನಿಂದ ನಂಜೆಯವರೆಗೆ ಕುಳಿತುಕೊಂಡು ಚರ್ಚೆ ಮಾಡಿ ಇಂಥಿಂಥ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದೆವು. ಆದರೆ ಅದು ಎಷ್ಟರ ಮಟ್ಟಿಗೆ ಕಾರ್ಯಸಾಧನೆಯಾಗಿದೆ ಎನ್ನುವುದು ನನಗಂತೂ ಅರ್ಥವಾಗಿಲ್ಲ. ಜನಗಳನ್ನು ಮೆಚ್ಚಿಸಬೇಕೆಂದು ಆ ಸ್ಕೀಂ ಹಾಕಿದ್ದೇವೆ, ಈ ಸ್ಕೀಂ ಹಾಕಿದ್ದೇವೆ, ಈ ಸ್ಕೀಂ ಹಾಕಿದ್ದೇವೆಂದು ಹೇಳಿ ಅವನ್ನು ಮುಂದಕ್ಕೆ ಬಿಡುತ್ತಿಲ್ಲ. ಹೀಗೆ ಜನರನ್ನು ಮರಳು ಮಾಡಿ ಕಾಲ ಹಾಕುತ್ತೀರಿ. ತಾಲ್ಲೂಕುಗಳಲ್ಲಿ ಹೋಗಬೇಕು ಎಂದರೆ ನಾವು ಹೋಗಲಕ್ಕೆ ಆಗುವುದಿಲ್ಲ. ಗ್ರಾಮಾಂತರಗಳಿಗೆ ಹೋಗಿ, ಸುರಕ್ಷಿತವಾಗಿ ವಾಪಸು ಬರಬೇಕಾದರೆ ಡೆಪ್ಯುಟಿ ಕಮಿಷನರ ಜೊತೆಯಲ್ಲಿ ಹೋಗಬೇಕು. ಅವರ ಮುಂದೆ ಜನರು ಹೆಚ್ಚಿಗೆ ಮಾತನಾಡುವುದಕ್ಕಾಗುವುದಿಲ್ಲ. ನಾವು ಒಬ್ಬಂಟಿಗರಾಗಿ ಹೋಗಲಕ್ಕಾಗುವುದಿಲ್ಲ. ಅಲ್ಲಿ ಗಲಾಟೆ ಜಾಸ್ತಿಯಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಭಯವೇ ನಿಮಗೆ?

ಶ್ರೀ ಕೆ. ಎಲ್. ನರಸಿಂಹಯ್ಯ.—ಆ ಭಯವನ್ನು ನೀವೇ ಉತ್ತನ್ನ ಮಾಡಿದ್ದೀರಿ. ಜನಕ್ಕೆ ಕೊಟ್ಟಂಥ ಭರವಸೆಗಳೇನು, ಅವನ್ನು ಎಷ್ಟುಮಟ್ಟಿಗೆ ಪಾಲಿಸುತ್ತಿದೀರಿ ದೇಶಕ್ಕೋಸ್ಕರ ಏನು ಮಾಡಬೇಕೆನ್ನುವುದರಲ್ಲಿ ಕುಂಠಿತವಾಗುತ್ತಿದೆ. ಇದರಿಂದಲೇ ನಮಗೆ ಆ ಭಯವಿದೆ. ನಾವು ಒಬ್ಬಂಟಿಗರಾಗಿ ಓಡಾಡಲಕ್ಕೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಒಬ್ಬರೇ ಹೋಗಲಿ. ತಾವು ಮಂತ್ರಿಗಳೆಂಬಂತಯಾವ ಅಧಿಕಾರಿಗಳೂ ಜೊತೆಗೆ ಇಲ್ಲದೆ ಹೋಗಿಬರಲಿ. ಆಗ ಜನ ಏನು ಹೇಳುತ್ತಾರೆಂಬುದೂ ಗೊತ್ತಾಗುತ್ತದೆ, ಒಬ್ಬರೇ ಹೋಗುವುದಕ್ಕೆ ಎಷ್ಟು ಭಯವಿದೆ ಎಂಬುದೂ ಗೊತ್ತಾಗುತ್ತದೆ.

Sri Kadidal MANJAPPA.—I take the challenge. I have understood the mind of the people of erstwhile State of Mysore. I am quite confident that I can boldly go to any area in the State without the assistance of anybody.

Sri C. J. MUCKANNAPPA (Gubbi).—The Hon'ble Minister has not understood the spirit of what he said. What he means is that Congress has incurred so much displeasure of the people. That is his idea.

ಶ್ರೀ ಕೆ. ಎರ್. ನರಸಿಂಹಯ್ಯ.–ನಮ್ಮ ಸ್ನೇಹಿತರು ಹೇಳತಕ್ಕದ್ದು ನರಿಯಲ್ಲ. ಕೆಲಸಮಾಡಿಕೊಡುತ್ತೇವೆ, ಧೈರ್ಯದಿಂದಿರಿ ಎಂದು ಹೇಳುತ್ತೇವೆ, ಆದರೆ ಕೆಲಸ ನಮರ್ಪಕವಾಗಿ ಆಗುತ್ತಿಲ್ಲವೆಂದು. ಹೇಳಿದೆ. ಶ್ರೀ ಮುಕ್ಕಣ್ಣಪ್ಪನವರ ಅರ್ಥ ಬೇರೆ ರೀತಿ ಇದೆ. ಇವೊತ್ತಿನ ದಿವಸ ನಮ್ಮ ಮುಖ್ಯ ಮಂತ್ರಿಗಳಾಗಲಿ, ರೆವೆನ್ಯೂ ಮಂತ್ರಿಗಳಾಗಲಿ ಹಳ್ಳಿ ಜನರಿಗೆ ಅನುಕೂಲವಾಗಲಿ ಎಂಬ ಭಾವನೆಯಿಂದ ಹೋಗಿಬರಲು ನನಗೆ ಸಂತೋಷ. ನಾವೂ ಹೋಗಿಬರುತ್ತೇವೆ ಅವರು ಕೊರಟಗೆರೆ ತಾಲ್ಲೂಕು ಕೋಳಾಲ ಎಂಬ ಹೋಬಳಿಗೆ ಹೋಗಿ ಬರಲಿ. ಹೆಚ್ಚು ಕಡಮೆ ಅದರೆ ನಾವು ಇರುತ್ತೇವೆ, ನುರಕ್ಷಿತವಾಗಿ ಕಳುಹಿನುತ್ತೇವೆ. ಶ್ರೀ ಪುಟ್ಟಣ್ಣನವರು, ಕೆಂಚಪ್ಪನವರು ಮತ್ತು ಇತರ ಮುಖಂಡರು ಅಲ್ಲಿಗೆ ಹೋಗಿ ಸುತ್ತಾಡಿಕೊಂಡು ಬಂದಿದ್ದಾರೆ. ವಾಸ್ತವಾಂಶವೇನು ಎಂಬುದನ್ನು ನೋಡಿದ್ದಾರೆ ಮತ್ತು ಅದನ್ನು ಹೇಳುತ್ತಾ ಇದ್ದಾರೆ. ಈ ವಿಚಾರದಲ್ಲಿ ನಿಜವಾಗಿ ಹೇಳಿದ್ದಾರೆ. ಈ ಕಾರಣಕ್ಕಾಗಿ ನಾವು ಹಳ್ಳಿಗಳಕಡೆ ಹೋದರೆ ವಾಸ್ತವವಾಗಿ ಹಳ್ಳಿಯವರು ಏನಾದರೂ ತಿಂಡಿತಿನ್ನಿ ಊಟಮಾಡಿ ಎಂದು ಹೇಳಿದರೆ ಮಾಡುವುದಕ್ಕೆ ಮನಸ್ಸು ಬರುವುದಿಲ್ಲ. ಮೊದಲನಿಂದ ಅವುಗಳು ನೆಗ್ಲೆಟ್ ಆಗಿ ಬಂದು ಬಿಟ್ಟಿವೆ. ಅವುಗಳಿಗೆ ಹೆಚ್ಚಿಗೆ ಗಮನ ಕೊಡಬೇಕು. ಸಾಂಕ್ಷ್ಯ ಆದ ಕೆರೆಗಳು ಇವೆ. ಅವುಗಳ ಕೆಲಸ ನಡೆಯಲಿ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ರಸ್ತೆಗಳು ಇಲ್ಲ. ರಸ್ತೆ ಹಾಕುವ ಕೆಲಸವನ್ನು ಪ್ರಾರಂಭಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಿ. ಅಕ್ಕಿಯನ್ನು ಒದಗಿಸಕೊಡಿತ್ತೇವೆ ಎಂದು ಹೇಳಿಬಿಟ್ಟರೆ ಸಾಕೆ? ರೈತರಿಗೆ ಅದನ್ನು ಕೊಳ್ಳತಕ್ಕ ಶಕ್ತಿಯೇ ಇಲ್ಲ. ನುಮ್ಮನೆ ಡಿಪೋಗಳನ್ನು ತೆರೆದರೆ ಸಾಲದು. ಅಕ್ಕಿಯನ್ನು ಕೊಳ್ಳುವುದಕ್ಕೆ ಹಳ್ಳಿಯ ಜನರಿಗೆ ಶಕ್ತಿ ಬರಬೇಕು. ಭಾವಿಗಳ ಕೆಲಸ ನಡೆದಿಲ್ಲ. ಮಳೆಗಾಲದಲ್ಲಿ ತೋಡಿನುವುದಕ್ಕೆ ಆಗುವುದಿಲ್ಲ. ಬೇಸಿಗೆ ಕಾಲ ಬಂದರೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿಲ್ಲ ಎಂದು ಹೇಳುತ್ತಾರೆ. ಸ್ಯಾಂಕ್ಷನ್ ಮಾಡಿದರೆ ಸರ್ಕಾರದಲ್ಲಿ ದುಡ್ಡಿರುವುದಿಲ್ಲ. ನಮ್ಮ ಡಿಸ್ಟ್ರಿಕ್ಟ್‌ಗೆ ಒಂದು ಲಕ್ಷ ರೂಪಾಯಿ ಕೊಟ್ಟಿಗು. ಒಂದೊಂದು ತಾಲ್ಲೂಕಿಗೆ ಹತ್ತು ಸಾವಿರ ರೂಪಾಯಿ ಬಂದಿದೆ. ಒಂದೊಂದು ಕಡೆ ಮೂರು ನಾಲ್ಕು ಸಾವಿರ ರೂಪಾಯಿಗಳಿಗೆ ಕಡಮೆ ಭಾವಿಯಾಗುವುದಿಲ್ಲ. ನಿಮ್ಮ ರೆಕ್ಯಾಚಾರದ ಪ್ರಕಾರ ತಾಲ್ಲೂಕಿಗೆ ಮೂರು-ನಾಲ್ಕು ಭಾವಿ ತೋಡಿನಬೇಕಾಗುತ್ತದೆ. ವಾಸ್ತವವಾಗಿ ಕಷ್ಟದವೆಶ ಇರುವುದರಿಂದ ಜಾಸ್ತಿ ಹಣ ಕೊಡಿ. ತುಮಕೂರು ತಾಲ್ಲೂಕಿನಲ್ಲಿ ಎರಡು ಸಾವಿರ ರೂಪಾಯಿಗಳಿಗೆ ಭಾವಿ ಆಗುತ್ತದೆ. ಕೊರಟಗೆರೆ ತಾಲ್ಲೂಕಿನಲ್ಲಿ ನಾಲ್ಕು ಐದು ಸಾವಿರ ರೂಪಾಯಿ ಆಗುತ್ತದೆ. ಇಂಥ ಕಡೆ ಹೆಚ್ಚಿಗೆ ದುಡ್ಡು ಕೊಟ್ಟು ಕೆಲಸ ಮಾಡಿಸಬೇಕಾಗುತ್ತದೆ.

ಮೊದಲನಿಂದಲೂ ಮಂತ್ರಿಗಳಿಗೂ ಸರ್ಕಾರಕ್ಕೂ ತಿಳಿನುತ್ತಲೇ ಇದ್ದೇನೆ. ಕಾಗದ ಬರೆದರೆ 'It is under consideration' ಎಂದು ಇಷ್ಟು ಜವಾಬು ನಮಗೆ ಬರುತ್ತಾ ಇದೆ. ಮಾನ್ಯಮಂತ್ರಿಗಳು ಸುತ್ತಿ ನೋಡಲಿ. ವಾಸ್ತವವಾದ ಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಂಡು ಬರಲಿ. ಕ್ಯಾಪ್‌ರಿಫೊರ್ಟಿನಲ್ಲಿ ಪ್ರತಿ ತಿಂಗಳಲ್ಲಿಯೂ ಫೇರ್, ಫೇರ್, ನ್ಯಾಟಿಸ್ ಫ್ಯಾಕ್ಟರಿ ಎಂದು ಬರೆಯುತ್ತಾರೆ. ಅದನ್ನು ಯಾರು ಬರೆಯುತ್ತಾರೋ ಗೊತ್ತಿಲ್ಲ. ಯಾರನ್ನಾದರೂ ಇಟ್ಟುಬಿಟ್ಟು ಬರೆಸುತ್ತಾ ಇದ್ದೀರೋ ಎಂದು ನನಗನ್ನಿಸುತ್ತದೆ. ಹಳ್ಳಿಗಳ ಕಡೆಯೂ ವಿದ್ಯಾವಂತರು ಇದ್ದಾರೆ. ಅವಿದ್ಯಾವಂತರೇ ಇದ್ದಿದರೆ ಗೆಜೆಟ್ ನೋಡತಕ್ಕಂಥಾವರು ಇರುತ್ತಿರಲಿಲ್ಲ. ನಾವು ಈ ವಿಷಯುಗಳನ್ನು ಯಾರಿಗೆ ಹೇಳಬೇಕು? ಹೀಗಾಗಲಕ್ಕೆ ಅವಕಾತ ಕೊಡಬಾರದು, ಎಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಅಧಿಕಾರಿಗಳು ಪ್ರವಾನ ಹೋದಕಾಲದಲ್ಲಿ ಒಳರಸ್ತೆಗಳಲ್ಲ ಹೋಗುವುದಿಲ್ಲ. ರಸ್ತೆಗಳು ಹೋಗುವ ಕಡೆ, ಹಸುರಾಗಿ ಕಂಡರೆ ಹುರುಳಿ, ರಾಗಿ, ಭತ್ತ ಆಗಿದೆ ಎಂದು ಹೇಳುವ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ. ಭತ್ತ ಗಿಡದಲ್ಲಿ ಬೆಳೆಯುತ್ತದೆ ಎಂದು ತಿಳಿದುಕೊಂಡಿರುವ ಅಧಿಕಾರಿಗಳಿದ್ದಾರೆ. ಹಸು ರಾಗಿದ್ದರೆ ಬೆಳೆ ಆಯಿತು, ಮುಗಿದು ಹೋಯಿತು ಎಂದು ಅವರ ಭಾವನೆ. ಯಾರು ಬೇಕಾದರೂ ಇವೊತ್ತು ಹೋಗಿ ಮಧುಗಿರಿ, ಪಾವಗಡ, ಕೊರಟಗೆರೆ, ಸಿರಾ ತಾಲ್ಲೂಕಿಗೆ ಹೋಗಿ ನೋಡಲಿ. ಅಲ್ಲಿಯ ಜನರಿಗೆ ಬಹಳ ಕಷ್ಟವಾಗಿದೆ. ಈ ಮೂರು ತಾಲ್ಲೂಕುಗಳನ್ನೂ ನಾನು ಮೊನ್ನೆ ನೋಡಿದ್ದೆನೆ. ಅದಕ್ಕೋಸ್ಕರ ದಯೆಯಿಟ್ಟು ಮಾನ್ಯ ಮಂತ್ರಿಗಳು ಅಲ್ಲಿಗೆ ಭೇಟಿ ಕೊಡಲಿ. ಅಸೆಂಬ್ಲಿ ಮುಗಿದಕೊಡಲೇ ಒಂದು ರೌಂಡು ಹೋಗಿಬರುತ್ತೇನೆ ಎಂದು ಸೂಚನೆ ಕೊಟ್ಟರು. ಒಳ್ಳೆಯ ಸೂಚನೆ. ಆಮೇಲೆಯಾದರೂ ಅವರಿಗೆ ನಾವು ಸತ್ಯಾಂಶವನ್ನು ಹೇಳುತ್ತಿದ್ದೇವೆಂದು ಮನವರಿಕೆಯಾಗುತ್ತದೆ. ನಾವು ಹೇಳಿದರೂ ಇಲ್ಲ ಎಂದು ಮೊಂಡುತನ ಹಿಡಿದರೆ ನವುಗೆ ಆಗುವುದಿಲ್ಲ. ಅವರು ಸೂಚನೆ ಮಾಡಿದ ರೀತಿಯಲ್ಲಾದರೂ ಮಾಡಿದರೆ ನಾವು ಹೇಳುವುದರಲ್ಲ ನಿಜವಿದೆ ಎನ್ನುವ ಭಾವನೆ ಬರುತ್ತದೆ. ಈಗಲಾದರೂ ಕೆಲಸ ಪ್ರಾರಂಭ ಮಾಡಿಸಿ. ರೈತನಿಗೆ ಸದ್ಯದಲ್ಲಿಯೇ ಜೀವನಕ್ಕೆ ಕಷ್ಟವಿವೆ. ತಕ್ಷಣದಲ್ಲಿಯೇ ಕೆಲಸಗಳನ್ನು ಪ್ರಾರಂಭಮಾಡಿನಬೇಕು. ಬರಗಾಲದ ಸ್ಥಿತಿ ಈ ಪ್ರದೇಶಗಳಲ್ಲ ಇದೆ ಎಂದು ಒಪ್ಪಿಕೊಂಡು ಈ ನಿರ್ಣಯಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿನುತ್ತೇನೆ.

*ಶ್ರೀ ಎಸ್. ವೈ. ಪಾಟೀರ್ (ಸಿಂಧಿಗಿ).–ಸಭಾಪತಿಗಳೇ, ಈ ಠರಾವನ್ನು ಅನುಮೋದಿಸುತ್ತಾ ವಿಜಾಪುರ ಜಿಲ್ಲೆಯ ದೃಷ್ಟಿಯಿಂದ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಈ ತರಹ ಠರಾವನ್ನು ತರತಕ್ಕಂಥ ಪ್ರಸಂಗ ಬಂದದ್ದು ನಿಜವಾಗಿಯೂ ಈ ಕರ್ಣಾಟಕ ನಾಡಿಗೆ ಅಷ್ಟೇನೂ ಸಂತೋಷಕರ ಸಂಗತಿ ಅಲ್ಲ. ಇದನ್ನು ವಿಜಾಪುರ ಜಿಲ್ಲೆಯ ದೃಷ್ಟಿಯಿಂದಲೇ ಹೇಳುತ್ತಿಲ್ಲ. ಈ ಠರಾವಿನಲ್ಲಿ ನಮೂದಿಸಿರುವ ಜಿಲ್ಲೆಗಳಲ್ಲ ಏನು ತೊಂದರೆಗಳಿವೆಯೊ ಅವುಗಳನ್ನು ಪೂರ್ಣವಾಗಿ ಸರ್ವೆಮಾಡಿ, ಆ ಪ್ರದೇಶಗಳ ಅನಿಶ್ಚಿತ ಪರಿಸ್ಥಿತಿಯನ್ನು ಪರಿಹರಿನದೆ ಇದ್ದರೆ ಜನತೆಗೆ ಮಾತ್ರವೇ ತೊಂದರೆಯಲ್ಲ, ಸರ್ಕಾರಕ್ಕೂ ಅಪರಿಮಿತ

ಕೊಂದರೆಯಾಗುತ್ತದೆ. ಬಿಜಾಪುರದ ಫ್ಯಾಮಿನ್‌ಗೆ ದೋಗೀ ಬತ ಎಂದು ಹೇಳುವುದುಂಟು. ಈ ದೋಗೀ ಬತ ಸಾವುಗಳಿಗೆ ಬಹಳ ಪ್ರಸಿದ್ಧವಾದುದು. ನಮ್ಮಲ್ಲಿ ದುಷ್ಕಾಲಕ್ಕೆ ಬರುವ ಬರಗಳಿಗೆ ಅನೇಕ ಹೆಸರುಗಳಿವೆ. ನಮ್ಮಲ್ಲಿ ಎರಡು ವರ್ಷಕ್ಕೆ, ಮೂರು ವರ್ಷಕ್ಕೆ ಶಕ್ಯವಿದ್ದರೆ ಪ್ರತಿ ವರ್ಷವೂ ಇದು ಬರಬಹುದು. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಮಸ್ಯೆಯನ್ನು ಆ ದೃಷ್ಟಿಯಿಂದ ನೋಡಬೇಕು. ಹಿಂದೆ ಬ್ರಿಟಿಷರ ಕಾಲದಲ್ಲೂ ಈ ಕ್ಷಾಮಪರಿಸ್ಥಿತಿ ಹೋಗಲಿಲ್ಲ. ಮುಂಬೈ ರಾಜ್ಯದಲ್ಲಿ ಇದ್ದಾಗಲೂ ಈ ಕಷ್ಟವನ್ನು ಹೋಗಿಸಲಿಲ್ಲ. ಆದರೆ ಈ ಕನ್ನಡ ರಾಜ್ಯವನ್ನು ಕಟ್ಟಿದನಂತರವೂ ಈ ದುಷ್ಕಾಲ ಪರಿಸ್ಥಿತಿ ಹೋಗದಿದ್ದರೆ ಜನತೆಗೆ ಒಂದು ತರಹ ತೊಂದರೆಯಾದರೆ, ಈ ಕನ್ನಡ ನಾಡಿನ ಸರ್ಕಾರಕ್ಕೂ ಒಂದು ರೀತಿಯ ಅಪಮಾನ. ಈ ದುಷ್ಕಾಲ ಪರಿಸ್ಥಿತಿ ಎಲ್ಲೆಲ್ಲಿದೆಯೋ ಅಲ್ಲಲ್ಲಿ ಪರಿಹಾರ ಕಾರ್ಯಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿದ್ದರೆ ಅಲ್ಲಿ ಮೊದಲು ತೆಗೆದುಕೊಳ್ಳಬೇಕು. ಕೋಲಾರದಲ್ಲಿದ್ದರೆ ಅಲ್ಲಿ ಮೊದಲು ತೆಗೆದುಕೊಳ್ಳಬೇಕು. ಬಿಜಾಪುರ ಜಿಲ್ಲಾ ಪರಿಸ್ಥಿತಿ ಎಲ್ಲೆಲ್ಲಿಯೂ ಇದೆ. ರಾಜ್ಯದಲ್ಲಿ ಆ ಪರಿಸ್ಥಿತಿ ಯಾವ ಪ್ರದೇಶದಲ್ಲಿದ್ದರೂ ಮೊದಲು ತೆಗೆದುಕೊಳ್ಳಬೇಕು. ಒಂದು ರಾಜ್ಯದ ಹಿತದೃಷ್ಟಿಯಿಂದ ಈ ಪರಿಹಾರ ಕಾರ್ಯಕ್ಕೆ ಎಷ್ಟು ಕೋಟಿ ರೂಪಾಯಿ ಹಿಡಿದರೂ ಅಡ್ಡಿ ಇಲ್ಲ, ಟ್ಯಾಕ್ಸ್ ಹಾಕಿದರೂ ಅಡ್ಡಿ ಇಲ್ಲ, ಈ ಪ್ರಶ್ನೆಯನ್ನು ಬಗೆಹರಿಸಿಲಿಕ್ಕೇಬೇಕು ಎಂದು ಕಾಂಗ್ರೆಸ್ ಪಾರ್ಟಿಯವರೂ ಒಪ್ಪುತ್ತಾರೆ, ವಿರೋಧ ಪಕ್ಷದವರೂ ಒಪ್ಪುತ್ತಾರೆ. ಜನತೆಯ ಕಲ್ಯಾಣ ಯಾವ ರೀತಿಯಿಂದ ಆಗುತ್ತದೆ ಎನ್ನುವ ದೃಷ್ಟಿಯಿಂದ ನಾವು ನೋಡಬೇಕು. ಬಿಜಾಪುರ ಜಿಲ್ಲೆಯ ಪರಿಸ್ಥಿತಿಯನ್ನು ಇದೇ ಇದೇ ಈ ಮಾನ್ಯ ಸಭೆಯಲ್ಲಿ ಹೇಳಿದ್ದೇವೆ. ಬಿಜಾಪುರ ಜಿಲ್ಲೆಯ ಭೂಮಿಯನ್ನೂ ನೋಡಿರಿ. ಮಂಡ್ಯ ಜಿಲ್ಲೆಯ ಭೂಮಿಯನ್ನೂ ನೋಡಿರಿ. ನಾನು ತುಮಕೂರು ಜಿಲ್ಲೆಯ ಭೂಮಿಯನ್ನೂ ನೋಡಿದ್ದೇನೆ; ಮತ್ತು ಹಳೆಯ ಮೈಸೂರು ರಾಜ್ಯದ ಬೇರೆ ಬೇರೆ ಪ್ರದೇಶಗಳ ಭೂಮಿಯನ್ನೆಲ್ಲಾ ನೋಡಿದ್ದೇನೆ. ಸರ್ ಎಂ. ವಿಶ್ವೇಶ್ವರಯ್ಯನವರು ಪುಣ್ಯಾತ್ಮರು. ಆ ಮಹಾನುಭಾವರು ಮಂಡ್ಯ ಜಿಲ್ಲೆಗೆ ಮಹೋಪಕಾರ ಮಾಡಿದಾರೆ. ಮಂಡ್ಯ ಜಿಲ್ಲೆಯ ನೀರಾವರಿ ಯೋಜನೆ ಬಹಳ ಸಂತೋಷದ ವಿಷಯ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ 47 ಕಳ್ಳಗಳು ಹರಿಯುತ್ತಾ ಇವೆ ಎಂದು ಶ್ರೀ ಚೆನ್ನಬಸಪ್ಪನವರು ಉತ್ತರ ಕೊಟ್ಟರು.

5-30 P.M.

ಈ 47 ಮಾತ್ರವಲ್ಲ, ನುತ್ತಲೂ ನೀರು ಲಭಿಸುವುದು. ಭೂಮಿಯಿದೆ, ನೀರಿದ್ದಲ್ಲಿ ಹೋಗಬಹುದು. ಆದರೆ ಹೊಸಿ ಒಣಗುತ್ತಿದೆ. ಇಲ್ಲಿ ಸುಂದರ ದೃಶ್ಯ ನೋಡಿ ಆನಂದಪಡಬಹುದು. ನಮ್ಮ ಕಡೆಯವರು ಫೋನ್ ಮಾಡಿ ತಮಗೆದುಷ್ಕಾಲವಿದೆ, ಅದನ್ನು ಮಾಪಿ, ಇದನ್ನು ಮಾಡಿ ಎಂದು ಹೇಳುತ್ತಿದ್ದಾರೆ. ಸ್ವಾತಂತ್ರ್ಯಗಳಿಸುವುದಕ್ಕೆ ಪೂರ್ವದಲ್ಲಿ ಯಾವ ಕಷ್ಟಪಡುತ್ತಿದ್ದೆವೋ ಆ ಕಷ್ಟ ಸ್ವಾತಂತ್ರ್ಯಬಂದರೂ ಹೋಗಲಿಲ್ಲ ಎಂದು ಹೇಳುವ ಜನರಿಗೆ ಉತ್ತರ ಕೊಡುವುದಕ್ಕೆ ಯಾವ ಮಾರ್ಗವೂ ಇಲ್ಲ. ಈ ದೃಷ್ಟಿಯಿಂದ ಮಂತ್ರಿಗಳಿಗೆ ಹೇಳುವುದು, ಬೇಕಾದಷ್ಟು ತೆರಿಗೆ ಹಾಕಿದರೂ ಪರವಾಗಿಲ್ಲ,—ಸುಧಾರಣೆ ಬೇಕಾದಂಗೆ ತೆರಿಗೆ ಕೊಡಲು ಸಿದ್ಧರಾಗಿರಬೇಕು,—ಯೋಗ್ಯ ರೀತಿಯಿಂದ ತೆರಿಗೆ ಹಾಕ್ಕಿದರೆ ಯಾರೂ ತಕರಾರು ಮಾಡುವುದಿಲ್ಲ; ನಮ್ಮ ಐದು ಹೊಳೆ ನೀರು ಬೆಳೆಗೆ ಉಪಯೋಗವಾಗುವಂತೆ ಮಾಡಿ ಬಿಜಾಪುರ ಜಿಲ್ಲೆಯನ್ನು ಪೂರ್ಣವಾಗಿ ಸುಧಾರಿಸಿದರೆ ತನ್ಮೂಲಕ ಕನ್ನಡನಾಡಿಗೆ ಮೂರು ಲಕ್ಷ ಟನ್ ಕಡಮೆಯಿದೆಯೆಂದೇನು ವ್ಯವಸಾಯ ಇಲಾಖೆ ಮಂತ್ರಿಗಳು ಹೇಳಿದರೋ ಅದು ಹೋಗಿ 15 ಲಕ್ಷ ಟನ್ ಬೆಳೆಯಬಹುದೆಂದು ಸಿದ್ಧಮಾಡಿಕೊಡಲು ತಯಾರಾಗಿದ್ದೇನೆ. ನಮ್ಮಲ್ಲಿ ಒಂದು ಸಾವಿರ ರೂಪಾಯಿಗೆ ಬಾವಿಯಾಗುವ ಅನುಕೂಲತೆಯಿದೆ. ಕ್ಯೆತ್ನಾ ಯೋಜನೆಬೇಡ, ಯಾವುದೂ ಬೇಡ. ಸರ್ಕಾರಿ ಸುಧಾರಣೆ ಒಪ್ಪಿಕೊಳ್ಳಲಿಕ್ಕೆ ತಯಾರಿದ್ದಾರೆ. ಪುಣೆಯಲ್ಲಿ ನೀರಿನ ವ್ಯವಸ್ಥೆ ಮಾಡುವ ಅಧಿಕಾರಿಗಳಿದ್ದಾರೆ. ಅದೇ ರೀತಿ ಇರುವ ನೀರನ್ನು ಯಾವ ರೀತಿ ಉಪಯೋಗಮಾಡಿಕೊಳ್ಳಬಹುದು, ಯಾವ ಮಣ್ಣಿನಲ್ಲಿ ಏನು ಬೆಳೆಯುತ್ತದೆ ಎಂಬುದನ್ನು ತಿಳಿಸಲು ವ್ಯವಸ್ಥೆಯಾಗಬೇಕು. ಯಾವ ದೇಶದಲ್ಲೇ ಆಗಲಿ ಇರುವ ಎಲ್ಲಾ ಸೌಲಭ್ಯಗಳನ್ನೂ ಉಪಯೋಗಿಸಿಕೊಳ್ಳಲು ತಕ್ಕ ಏರ್ಪಾಡಾಗಬೇಕಾದದ್ದು ಅಗತ್ಯ. ಆ ದೃಷ್ಟಿಯಿಂದ ಮಾನ್ಯಮಂತ್ರಿಗಳು ಪ್ರವಾಸ ಮಾಡುತ್ತಿದ್ದರೆ ಅದನ್ನು ಟೀಕಿಸುವುದನ್ನ ನೋಡಿ ಆಶ್ಚರ್ಯವಾಗುತ್ತಿದೆ. ರಾಜ್ಯಪಾಳುವಾಗ ಒಂದೇ ಸ್ಥಳದಲ್ಲಿ ಕುಳಿತು ಹೇಗೆ ರಾಜ್ಯಭಾರ ಮಾಡುವುದು! ಶ್ರೀ ಮುಕ್ಕಣ್ಣಪ್ಪನವರು ಪ್ರತಿಯೊಂದು ನಲವೂ ಟೀಕೆ ಮಾಡುತ್ತಿದ್ದಾರೆ. ಶ್ರೀ ಕೆಂಚಪ್ಪನವರು ಇಂಥ ಉದಾತ್ತ ನಿರ್ಣಯ ತಂದಿರುವುದಕ್ಕಾಗಿ ಅವರನ್ನು ಅಭಾರ ಮನ್ನಿಸುತ್ತಿದ್ದೇನೆ. ಯಾವ ಜಿಲ್ಲೆಯಲ್ಲೇ ಆಗಲಿ ಇರುವ ತೊಂದರೆ ನಿವಾರಣೆಯಾಗಬೇಕು. ಶೇಕಡ ಎಂಭತ್ತು ಜನ ಒಕ್ಕಲಿಗರೆಂದು ವರ್ಣನೆ ಮಾಡುತ್ತಿದ್ದೀವೆಯೇ ಹೊರತು ಅವರ ಕಡೆ ಸಾಕಷ್ಟು ಗಮನಕೊಟ್ಟಲ್ಲ. ಇದೊಂದು ಕೊರತೆ. ಆದ್ದರಿಂದ ಇಂಥ ಠರಾವು ತರುವ ಸಂದರ್ಭ ಇದೇ ಕಡೆಯದಾಗಬೇಕು. ಔದ್ಯೋಗಿಕ ವಿಚಾರ ಆಮೇಲೆ ಮಾತನಾಡೋಣ. ದುಷ್ಕಾಲವಿದೆ, ಮಳೆಯಿಲ್ಲ ಎಂದು ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವ ಸಂದರ್ಭ ಇದೇ ಕಡೆಯದಾಗಬೇಕು. ಈ ದುರಾದೃಷ್ಟ ಪುನಃ ಪುನಃ ಬರಬಾರದು. ಆದ್ದರಿಂದ ಬಿಜಾಪುರ ಜಿಲ್ಲೆಯಲ್ಲಿಕಲ್ಯಾಣಕಾರಿ ಯಾಗುವ ಪ್ರತಿಯೊಂದು ಕಾರ್ಯಕ್ರಮವನ್ನೂ ಕೈಕೊಳ್ಳಬೇಕು. ಬಿಜಾಪುರ ಜಿಲ್ಲೆಯ ಮಣ್ಣನ್ನು ನೋಡಿದರೆ ಎಲ್ಲರೂ ಅಲ್ಲೇ ನೀರಾವರಿ ಮಾಡುತ್ತೇವೆ ಎಂದು ಹೇಳುವ ಸನ್ನಿವೇಶ ಬರಬಹುದು. ಎಷ್ಟೋ ಸಲ ಇದನ್ನು ಹೇಳಿದ್ದೇವೆ. ಅಥಣಿ ತಾಲ್ಲೂಕು ಪ್ರಸಂಗ ಬಹಳ ದುರ್ಭರವಾಗಿದೆ. ಉತ್ತಮ ತರದ ಭೂಮಿ, ಹರಿಯುವ ನೀರು ಇದೆ, ಪಂಚಪಕ್ವಾನ್ನ ಇದೆ. ಆದರೆ ಊಟ ಮಾಡುವುದಕ್ಕೆ ಬರುವುದಿಲ್ಲ; ಬೆಳೆ ಒಣಗುವುದನ್ನು ನೋಡುವುದಕ್ಕಾಗುವುದಿಲ್ಲ, ಬಹಳ ದುಃಖವಾಗುತ್ತದೆ. ನಿಜವಾಗಿಯೂ ಇದೇ ಪರಿಸ್ಥಿತಿ ಮುಂದುವರಿದರೆ ಜನರು ಗುಳೆ ಹೋಗಬಹುದು, ಇನ್ನು ಕೆಲವು ದಿವಸಗಳಲ್ಲಿ ಒಕ್ಕಲಿಗರು ಎತ್ತುಗಳನ್ನು ಮಾರಿ ಹೊರಟು ಹೋಗಬಹುದು. ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲೆಗಳನ್ನೂ ಸರ್ವೆ ಮಾಡಿ ತಕ್ಕ ವ್ಯವಸ್ಥೆ ಮಾಡಬೇಕು. ಅನ್ನವಿಲ್ಲದೆ ಯಾವ ಕೆಲಸವನ್ನು ಮಾಡಲಾಗುವುದಿಲ್ಲ. ದೇಶಸಂರಕ್ಷಣೆ ಮಾಡಬೇಕಾದರೆ ಸೈನಿಕರಿಗೆ ಅನ್ನಬೇಕು, ಶಕ್ತಿವರ್ಧಕವಾಗಲು ಆಹಾರದ ಅನುಕೂಲತೆ ಬೇಕು. ದ್ರಾಕ್ಷಿ, ಮೂಸಂಬಿ ಮುಂತಾದುವನ್ನು ಬೆಳೆಯಲು ಬಿಜಾಪುರದಲ್ಲಿ ಅನುಕೂಲತೆ ಇದೆ. ನೀರಾವರಿ ಅನುಕೂಲ ಮಾಡಿದಲ್ಲಿ ಬೇಕಾದಷ್ಟು ದ್ರಾಕ್ಷಿ ಬೆಳೆಯಬಹುದು. ಬಿಜಾಪುರದ ಕಡೆಹೋದಾಗ

(ಶ್ರೀ ಎಸ್. ವೈ. ಪಾಟೀರ್)

ಅಲ್ಲಿನ ದ್ರಾಕ್ಷಿ ತಿಂದು ನೋಡಬಹುದು. ಅದು ಬಹಳ ಚೆನ್ನಾಗಿದೆ. ಇದೆಂದು ತಾತ್ಕಾರ್ತಿಕವಾದ ಠರಾವು. ನಂಸ್ಥಾನಾಮಳೆ ಸರ್ವವಾಡಿ ಅನ್ನ ಸಮಸ್ಯೆ ಪರಿಹಾರ ಮಾಡಬೇಕು. ಈಗ ನೆಹರೂರವರು ಪರದೇಶಗಳಲ್ಲಿ ಯಾಚನೆವಾಡುತ್ತಿದ್ದಾರೆ, ಅದು ಬೇಡ. ಕನ್ನಡನಾಡಿಗಾಗಿ ನೆಹರೂ ಬೇಡುವ ಸಂದರ್ಭ ಬರಬಾರದು. ಮೂರು ಲಕ್ಷಟ್ ಅಲ್ಲ, 50 ಲಕ್ಷಟ್ ಬೇಕಾದರೂ ಉತ್ಪತ್ತಿಮಾಡುವ ಸಾಮರ್ಥ್ಯ ಪಡೆಯಬೇಕು, ಅದಕ್ಕೆರುವ ಸನ್ನಿವೇಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿ ಈ ಠರಾವನ್ನು ಅಂತಃಕರಣಪೂರ್ವಕವಾಗಿ ಅನುಮೋದಿಸುತ್ತೇನೆ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).— ಅಧ್ಯಕ್ಷರೆ, ಈ ದಿವನ ಕ್ಷಾಮಪರಿಸ್ಥಿತಿಯ ವಿಚಾರ ವಿನಿಮಯಮಾಡುವಕಾಲದಲ್ಲಿ ಬರಗಾಲ ಮಂತ್ರಿಗಳು ಮಾತ್ರ ಇಲ್ಲಿ ಹಾಜರಿದ್ದು ಹಣಕಾಸಿನ ಮಂತ್ರಿಗಳಾಗಲಿ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖಾ ಮಂತ್ರಿಗಳಾಗಲಿ ಇಲ್ಲದಿರುವುದು ವಿಷಾದದ ಸಂಗತಿ. ಆದರೂ ಕಾಂಗ್ರೆಸ್‌ನವರು ಪ್ರತಿಯೊಂದು ಸಲವೂ ವಿರೋಧ ಪಕ್ಷವನ್ನು ಟೀಕೆ ಮಾಡುತ್ತಿದ್ದಾರೆ. ನಮ್ಮ ಕೆಂಚಪ್ಪನವರು ಕಾರು, ಪ್ರಯಾಣಭತ್ಯೆ ವಗೈರೆ ಇಲ್ಲದಿದ್ದರೂ ವಿರೋಧಪಕ್ಷದ ಪ್ರತಿನಿಧಿಯಾಗಿ ಸದ್ಭಾವನೆಯಿಂದ ದೇಶಾದ್ಯಂತ ಸಂಚಾರಮಾಡಿ ಇರುವ ಚಿತ್ರವನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಆದರಿಂದ ಕಷ್ಟಕಾಲದಲ್ಲಿ ವಿರೋಧಪಕ್ಷದ ನಾಯಕರು ಈ ರೀತಿ ಸಂಚಾರ ಮಾಡಿ ನೋಡಿ ಕಾಲಹರಣಮಾಡದೆ ಇರುವ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದಿರುವುದಕ್ಕಾಗಿ, ಇದೇ ರೀತಿ ಒಳ್ಳೆಯ ಕೆಲಸಗಳಲ್ಲಿ ಸಹಕರಿಸುತ್ತಿರುವುದಕ್ಕಾಗಿ, ಸರ್ಕಾರದವತು ಅವರಿಗೆ ಕೃತಜ್ಞರಾಗಿರುತ್ತಾರೆಂದು ನುಡಿಯುತ್ತೇನೆ.

ಅನೇಕ ಅಧಿಕಾರಿಗಳನ್ನು ಅಮೇರಿಕಾ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಕಳುಹಿಸಿ ಅಲ್ಲಿ ಹೇಗಿವೆಯೆಂದು ತಿಳಿದು ವಿವರಣೆಮಾಡುವುದಕ್ಕೆ ಬದಲಾಗಿ ನಮ್ಮ ತಾಲ್ಲೂಕುಗಳನ್ನು ಯಾವ ರೀತಿ ಅಭಿವೃದ್ಧಿ ಮಾಡಿದರೆ ದೇಶ ವಂದಮವರಿಯುತ್ತದೆ, ಅದಕ್ಕೇನಾಗಬೇಕು ಎಂಬುದನ್ನು ಪ್ರತ್ಯಕ್ಷವಾಗಿ ನೋಡಬೇಕು. ಇಲ್ಲದಿದ್ದರೆ ಸಾಕಾದಷ್ಟು ಪ್ರಯೋಜನವಾಗುವುದಿಲ್ಲ.

ಅಮೇರಿಕದಲ್ಲಿ ಹಾಗೆ ಇದೆ, ಜಪಾನಿನಲ್ಲಿ ಹಿಗೆ ಇದೆ ಎಂಬ ಮಂತ್ರಿಗಳ ಹೇಳಿಕೆಯಿಂದ ಜನರು ನಿಜವಾಗಿಯೂ ತೃಪ್ತರಾಗುವುದಿಲ್ಲ. ಇನ್ನು ಮುಂದೆ ಕ್ಷಾಮ ಪರಿಸ್ಥಿತಿ ತಾಳದಿರುವಂಥಾ ಒಂದು ಸ್ವತಂತ್ರವಾದ ಪರಿಹಾರೋಪಾಯುವ ಕ್ರಮವನು ಕೈಕೊಳ್ಳಬೇಕು. ಈಗ ಭಾಪತಿಗೆನುವುದಕ್ಕಾಗಿ 150 ರೂಪಾಯಿ ಸಬಸಿಡಿಕೊಡುತ್ತಾರೆ. ಆದರೆ ನಾಲ್ಕೈದು ಸಾವಿರ ರೂಪಾಯಿ ಖರ್ಚುಮಾಡಿ ಭಾವಿ ಕಟ್ಟಿಸಬೇಕಾಗುತ್ತದೆ. ಸರಕಾರ ಕೊಡತಕ್ಕ ಸಬ್‌ಸಿಡಿ ಸಾಲದು, ಇನ್ನೂ ಹೆಚ್ಚಿಗೆ ಕೊಡಬೇಕು. ಈ ಕಾನೂನು ಬಹಳ ಕಾಲದಿಂದ ಬಂದಿದೆ, ಇದರಿಂದ ಏನೂ ಪ್ರಯೋಜನವಾಗುವದಿಲ್ಲ. ಸಾಮಾನ್ಯ ರೈತನಿಗೆ ಇರತಕ್ಕ ಕಿರುಕುಳ ಹೋಗಬೇಕಾಗಿರಬೇಕು. ನಮ್ಮ ರೆವೆನ್ಯೂ ಮಂತ್ರಿಗಳು ಅನೇಕ ಜಿಲ್ಲೆಗಳಲ್ಲಿ ಸಂಚಾರಮಾಡಿದ್ದಾರೆ. ಅವರೊಬ್ಬರು ಮಾತ್ರ ನನಗೆ ಹೃತ್ಪೂರ್ವಕವಾಗಿ ಉಪಕಾರ ಮಾಡುವ ಧರವಸೆಕೊಡುತ್ತಾರೆ. ಕೆಲವರು ಸುಮ್ಮನೆ ಭರವಸೆ ಕೊಡುತ್ತಾರೆ. ಆಮೇಲೆ ಮರೆತು ಬಿಡುತ್ತಾರೆ. ಆದರೆ ನಮ್ಮ ರೆವೆನ್ಯೂ ಮಂತ್ರಿಗಳು ಹಾಗಲ್ಲ, ನಿಜವಾಗಿಯೂ ಜನರನ್ನು ಸಂತೈಸುವ ದಕ್ಕಾಗಿ ಹೃತ್ಪೂರ್ವಕವಾಗಿ ಭರವಸೆಕೊಡುತ್ತಾರೆ. ಅವರು ಕೊಡುವ ಭರವಸೆ ಮುಂದೆ ಕಾರ್ಯರೂಪದಲ್ಲಿ ಬರುತ್ತದೆ. ಆದಕ್ಕಾಗಿ ನಾನು ನಂತೊಷಪಡುತ್ತೇನೆ.

ಈಗ ರಿಲೀಫ್ ಕಾಂಗಾರಿಗಳಿಗಾಗಿ 20 ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಹೇಳಿದ್ದರು. ಈ ಎಲ್ಲ ಕೆಲಸಗಳು ಆಗುವುದಕ್ಕೆ ಮುಂಚೆ scrutiny ಮಾಡುವದಕ್ಕಾಗಿ PWD ಆಫೀಸಿಗೆ ಕಳಿಸುತ್ತಾರೆ. ಈ scrutiny ಏತಕ್ಕಾಗಿ ಮಾಡಿಸಬೇಕು ? ಮಾಡುವ ಕೆಲಸ PWD ರಸ್ತೆಯೇ ಆಗಿರುತ್ತದೆ. ಈ ಇರಾಬಿಗೆ ಕೆಲಸ ಮಾತಲಕ್ಕೆ ಹೇಳಬಹುದು. ಮಣ್ಣು ಕೆಲಸಕ್ಕೆ ಆರು ಆಣೆ, ಮೂರು ಆಣೆ ದರದಂತೆ ರಿಲೀಫ್ ಕೆಲಸ ಆಗುವದಿಲ್ಲ. ಆದುದಂದ ಕೆಲಸ ಉಳಿದುಬಿಡುತ್ತದೆ. ಸರಕಾರದವರು ಜನತೆಗಾಗಿ ಖರ್ಚುಮಾಡಲಿಕ್ಕೆ ಅಂಜುವಾನವಾಡಬಾರದು. ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಸ್ವಲ್ಪ ವಳೆಯು ಆಯಿತು. ಆದರೆ ಇದ್ದ ಬೆಳೆಯೆಲ್ಲಾ ಕೆಟ್ಟು ಹೋಗಿದೆ. ಒಂದು ಭಾವಿ ಕಟ್ಟಿಸುವದಕ್ಕೆ ನಾಲ್ಕು-ಐದು ಸಾವಿರ ರೂಪಾಯಿ ಖರ್ಚಾಗುತ್ತದೆ. ಈ ಕೆಲಸಕ್ಕೆ ಸಹಾಯಮಾಡುವುದಕ್ಕಾಗಿ ಗ್ರ್ಯಾಂಟು ಹೆಚ್ಚುಮಾಡಬೇಕು. ಇಲ್ಲಿ ಬೆಂಗಳೂರಿನಲ್ಲಿ ಮಂತ್ರಿಗಳು ಕುಳಿತು ಪತ್ರಿಕಾ ಪ್ರತಿನಿಧಿಗಳನ್ನು ಕರೆಸಿ ಒಂದು ಸ್ಟೇಟ್‌ಮೆಂಟ್‌ಕೊಟ್ಟರೆ ಆಗುವದಿಲ್ಲ. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಒಂದೊಂದು ಜೀಪ್ ಗಾಡಿಯನ್ನು ಇಟ್ಟು ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸುವ ದಕ್ಕೆ ಅವಕಾಶಮಾಡಿಕೊಡಬೇಕು. ಇತಿಚೆಗೆ ಮೈಲಿನಾಡಿನ ಅಭಿವೃದ್ಧಿಸೋನ್ನರ ಮಲೆನಾಡು ಅಭಿವೃದ್ಧಿ ಬೋರ್ಡು ಒಂದನ್ನು ರಚಿಸಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಅದೇ ರೀತಿಯಾಗಿ ಬರಗಾಲ ಪೀಡಿತ ಪ್ರದೇಶಕ್ಕಾಗಿ ಒಂದು ಬೋರ್ಡು ರಚಿಸಬೇಕು. ಕೋಲಾರ ತುಮಕೂರು ಜಿಲ್ಲೆಯು ಬಯಲು ಪ್ರದೇಶವಾಗಿದ್ದು ಉತ್ತಮ ಭೂಮಿ ಇದೆ. ಆದರೂ ಸಹ ಯಾವಾಗ ಬರಗಾಲ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ಹೇಳುವದಕ್ಕಾಗುವುದಿಲ್ಲ. ಈ ಪ್ರದೇಶದಲ್ಲಿ ಸರ್ವೆ ಮಾಡಿಸಿ, ಖರ್ಚು ಜಾಸ್ತಿ ಬಂದರೂ ಸಹ ಅಚ್ಚುಕಟ್ಟು ವಿಸ್ತಾರವನ್ನು ಕಟ್ಟಿಸಿ ನಿರಾವರಿ ಸೌಕರ್ಯ ಒದಗಿಸಿಕೊಡಬೇಕು. ಈ ಅನೆಂಪಿಯಲ್ಲಿ ವರ್ಷ ವರ್ಷ ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. ಆದಕಾರಣ ನಮ್ಮ ರೆವೆನ್ಯೂ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚು ನಿಗಾ ತೆಗೆದು ಕೊಳ್ಳುತ್ತಾರೆಂದು ನಾನು ನುಡಿದೆನೆ.

Mr. CHAIRMAN.—The debate on this resolution will be closing at 6 P.M. and the item which has been postponed from time to time, namely, the point raised by Hon'ble Member Sri Revannasiddappa to raise half an hour discussion will be taken up afterwards. I now call upon Sri Tare Gowda to speak.

Sri B. K. PUTTARAMIYA.—Will the debate on this resolution be closed for today ?

Mr. CHAIRMAN.—No. Normally the sitting comes to an end at 6 P.M. each day; it is in that sense I said the debate on this resolution will be closed for today. The half an hour discussion will commence at 6 P.M. Meanwhile Sri Tare Gowda will speak.

Sri B. L. NARAYANASWAMY.—Will this be continued tomorrow?

Mr. CHAIRMAN.—Of course, if it is a non-official day it will be continued tomorrow also.

*ಶ್ರೀ ಟಿ. ತಾರೇಗೌಡ (ಸಿರಾ).—ಈ ನಿರ್ಣಯವನ್ನು ಪುಷ್ಟೀಕರಿಸುತ್ತಾ, ಈ ನಿರ್ಣಯವನ್ನು ಮಂಡಿಸಿರತಕ್ಕ ಶ್ರೀಮಾನ್ ಕೆಂಚಪ್ಪನವರನ್ನು ಮತ್ತು ಅದಕ್ಕೆ ತಿದ್ದುಪಡಿಯನ್ನು ಸೂಚಿಸಿರತಕ್ಕಂಥಾ ಮಾನ್ಯ ಮಿತ್ರರಾದ ಶ್ರೀಮಾನ್ ಬಿ. ಎಲ್. ನಾರಾಯಣಸ್ವಾಮಿಯವರನ್ನು ಪ್ರಥಮ ವಂದಿಸಬೇಕಾಗಿದೆ. ಸಾಮಾನ್ಯವಾಗಿ ತುಮಕೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳು, ಉತ್ತರ ಕರ್ನಾಟಕದಲ್ಲಿಯು ಎಡಾಪುರ, ಬೀದರ ವಗೈರೆ ಜಿಲ್ಲೆಗಳು ಆಗಾಗ್ಗೆ ಕ್ಷಾಮ ಪರಿಸ್ಥಿತಿಯಿಂದ ಪೀಡಿತವಾಗಿ, ಈ ಪ್ರದೇಶ ಬರಗಾಲ ಪ್ರದೇಶವಾಗಿದೆ ಎಂಬುದು ಸರ್ಕಾರಕ್ಕೂ ಜನತೆಗೂ ಜನಜನಿತವಾದ ವಿಚಾರ. 1952-53 ನೆಯ ಸಾಲಿನಲ್ಲಿ ಭಾರತ ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಅವರು ಮೈಸೂರು ದೇಶದಲ್ಲಿ ಸಂಚಾರ ಮಾಡಿದಾಗ್ಗೆ ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಚಾರಮಾಡಿ ಈ ಪ್ರದೇಶ ಕ್ಷಾಮ ಪ್ರದೇಶವಾಗಿದೆ ಎಂಬುದನ್ನು ನೋಡಿ ಹೇಳಿದ್ದಾರೆ. ಈ ಜಿಲ್ಲೆಗಳಲ್ಲಿ ಸಾಧಾರಣವಾಗಿ 14 ಅಂಗುಲದವರೆಗೆ ಮಳೆಯಾಗುತ್ತದೆ. ಇದು ಸಣ್ಣ ಸಣ್ಣ ಕೆರೆಗಳಿಂದ, ಬಾವಿಗಳಿಂದ ನೀರು ಎತ್ತಿಕೊಂಡು ವ್ಯವಸಾಯ ಮಾಡತಕ್ಕ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಇನ್ನೂ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಡಬೇಕು ಎಂಬುದು ಮುಖ್ಯವಾದುದು. ಇದಕ್ಕೆ ಹೆಚ್ಚಿನ ನಿಗಾಕೊಡುವುದಕ್ಕೆ ವಿದ್ಯುಚ್ಛಕ್ತಿ ಕೊಡುವುದು ಮುಖ್ಯವಾದದ್ದು ಎಂದು ಭಾವಿಸಿ ಐವತ್ತು ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಈ ಪ್ರದೇಶಗಳಿಗಾಗಿ ಮೈಸೂರು ಸರ್ಕಾರದವರಿಗೆ ಕೊಟ್ಟಿದ್ದಾರೆ. ಇದು 1953ನೆಯ ಸಾಲಿನಲ್ಲಿ ಕೊಟ್ಟಿರತಕ್ಕದ್ದು ಮತ್ತು ಈಗ ಅದು ಎಲ್ಲಾ ಉಪಯೋಗವಾಗಿದ್ದರೂ ಕೂಡ ಈ ಪ್ರದೇಶದಲ್ಲಿ ಬಹು ಭಾಗಕ್ಕೆ ಇನ್ನೂ ವಿದ್ಯುಚ್ಛಕ್ತಿ ಸ್ಪಲಭ್ಯ ಒದಗಿಲ್ಲ. 1952-53ರಲ್ಲಿ ಯಾವ ಕಷ್ಟಪರಿಸ್ಥಿತಿಯಲ್ಲಿದ್ದರೋ ಅದಕ್ಕಿಂತ ಹೆಚ್ಚಾಗಿಯೇ ಕ್ಷಾಮಕ್ಕೆ ತುತ್ತಾಗಿ ನರಳುತ್ತಾ, ಬರುವುದನ್ನು ನಾವೆಲ್ಲರೂ ನೋಡುತ್ತಾ ಇದ್ದೇವೆ. ಈ ಪ್ರದೇಶಗಳಲ್ಲಿ ಮುಖ್ಯವಾದ ಕೆಲವು ಭಾಗಗಳಲ್ಲಿ ಎಂದರೆ ಹೈವೇನಲ್ಲಿ ದೆಂಗಳೂರಿನಿಂದ ಹುಬ್ಬಳ್ಳಿ, ಬೆಳಗಾಂಗೆ ಹೋಗತಕ್ಕ ಪ್ರದೇಶಗಳಲ್ಲಿ ಮಾತ್ರ ಮಳೆಗಳು ಮತ್ತು ಸ್ಟೇಟ್ ಅಫೀನರ್ಸ್ ಪ್ರಯಾಣ ಮಾಡುತ್ತಾರೆ. ಆದರೆ ತಾಲ್ಲೂಕಿನಲ್ಲಿರತಕ್ಕ ಇಂಟರ್ ಕಮ್ಯೂನಿಕೇಷನ್ ರಸ್ತೆ-ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳಲ್ಲಿ ಪ್ರಯಾಣ ಮಾಡಿದರೆ ಈ ದಿವನ ಮಾನ್ಯ ಕೆಂಚಪ್ಪನವರು ಮಂಡಿಸಿರತಕ್ಕಂಥ ಈ ನಿರ್ಣಯ ಸಾಧುವಾದದ್ದು ಎಂದು ಗೊತ್ತಾಗುತ್ತದೆ. ಈಗರಾದರೂ ಸರ್ಕಾರದವರು ಇದಕ್ಕೆ ಮಾನ್ಯತೆ ಕೊಟ್ಟು ಶ್ರೀಮಾನ್ ನಾರಾಯಣಸ್ವಾಮಿಯವರು ತಿಳಿಸಿದಂತೆ ಒಂದು ಬೋರ್ಡ್ ಸ್ಥಾಪನೆಮಾಡಿ ವಿಶೇಷ ಕಾರ್ಯಕ್ರಮಗಳು, ಯೋಜನೆಗಳ ಮುಖಾಂತರ ಸೌಕರ್ಯವನ್ನೊದಗಿಸಿ ಈ ಪ್ರದೇಶದ ಜನಗಳಿಗೆ ನೆಮ್ಮದಿಯನ್ನುಂಟುಮಾಡುತ್ತೀರಿ ಎಂದು ನಾನು ನಂಬಿದ್ದೇನೆ.

ಸ್ವಾಮಿ ಈ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಈ ಪ್ರದೇಶದಲ್ಲಿ ಮಳೆ ಆಗದೇ ಆಗಲೇ ಜನರು ಹಾಹಾಕಾರಕ್ಕೊಳಗಾಗಿ ಮುಂದೆ ಜೀವನ ಹೇಗೆ ಸಾಗಿಸುವುದು ಎಂಬ ಯೋಚನೆಗೊಳಗಾಗಿದ್ದರು. ಅಲ್ಲಿಂದೀಚೆಗೆ ತುಮಕೂರು ಜಿಲ್ಲೆಯಲ್ಲಿ ಸಹಕಾರ ಮಂತ್ರಿಗಳಾದಂತಹ ಮಾಲ ದುರಿಯಪ್ಪನವರು ಮತ್ತು ಸ್ಥಳೀಯ ಸಂಸ್ಥೆಗಳ ನಾಯಕರಾದ ನುಬ್ಬಹ್ಮಣ್ಯರವರು ಆ ಪ್ರದೇಶದಲ್ಲಿ ಸಂಚಾರ ಮಾಡಿದರು. ನಮ್ಮ ಜನರು ಅವರನ್ನು ಅವರು ಇಂಟೀರಿಯರ್‌ನಲ್ಲಿ ಪ್ರವೇಶ ಮಾಡಿದಾಗ ಮುತ್ತಿಗೆ ಹಾಕಿ ಆ ಪ್ರದೇಶ ಅಭಾವಕ್ಕೆ ತುತ್ತಾಗಿದೆ ಎಂಬುದನ್ನು ಬಹಳಮಟ್ಟಿಗೆ ಮನದಟ್ಟು ಮಾಡಿಕೊಟ್ಟಿದ್ದರು. ಅಲ್ಲ ಅಭಾವವನ್ನು ಹೋಗರಾಡಿಸಬೇಕಾದರೆ ತುರ್ತು ಕಾರ್ಯಕ್ರಮ ಅವಶ್ಯಕ ಎಂದು ಹೇಳಿ ಅವರ ಅವಗಾಹನೆಗೆ ತಂದರೂಕೂಡ, ತುಮಕೂರು ಜಿಲ್ಲೆಯವರಾದ ಇಬ್ಬರು ಮಂತ್ರಿಗಳಿದ್ದರೂ ಕೂಡ, ಅವರ ಕಷ್ಟನಿವಾರಣೆ ಆಗಲಿಲ್ಲ. ನಮ್ಮ ಮಿತ್ರರಾದ ಶ್ರೀಮಾನ್ ನರಸಿಂಹಯ್ಯನವರು ತಿಳಿಸಿದಹಾಗೆ, ನಮ್ಮ ಕ್ಷೇತ್ರದಲ್ಲಿ ನಾವು ಸಂಚಾರ ಮಾಡುವಾಗ ನಾವು ಆ ಜನಗಳಿಂದ ಓಟು ತೆಗೆದುಕೊಂಡು ಬಂದು ಅವರಿಗೆ ಏನಾದರೂ ಉಪಕಾರವಾಗತಕ್ಕ ಕೆಲಸ ಮಾಡಿದ ಪಕ್ಷದಲ್ಲಿ ನಮಗೆ ಮಾನ್ಯತೆ ಬರುತ್ತದೆಯೇ ಏನಾ ಇಲ್ಲದೆ ಇದ್ದರೆ ಇಲ್ಲ. ನಮ್ಮ ಬೇಡಿಕೆಗೆ ಮಾನ್ಯತೆ ಸಿಕ್ಕಿ ಅವರಿಗೆ ಸೌಲಭ್ಯಗಳು ಒದಗುತ್ತದೆಯೋ ಎನ್ನುವುದರಲ್ಲಿ ಅನುಮಾನ ಕಾಣುತ್ತಾ ಇದೆ. ಮುಖ್ಯವಾಗಿ ನನ್ನ ಕಾನ್ಸ್ಟಿಟ್ಯೂಯೆನ್ಸಿ ಆದ ಸಿರಾ-ಪಾವಗಡದಲ್ಲಿ ಕೆಲವು ಮೇಜರ್ ಕೆರೆಗಳು ಇವೆ, ಅನೇಕ ಮೈನರ್ ಕೆರೆಗಳು ಇವೆ. ಮೈನರ್ ಕೆರೆಗಳಲ್ಲಿ ಅನೇಕವು ಹೂಳು ತುಂಬಿ ನೀರಿನಮಟ್ಟ ಕಡಮೆಆಗಿ ಫಸಲು ಆಗುತ್ತಾ ಇಲ್ಲ. ಅಲ್ಲಿ ಹಿರಿಯೂರು, ಸಿರಾ ತಾಲ್ಲೂಕುಗಳಿಗೆ ಅನುಕೂಲವಾಗತಕ್ಕ ಒಂದು ರಿನರ್ವಾಯರ್ ಪ್ರಾಜೆಕ್ಟು ಇದೆ. ಅದರಿಂದ ಹಿರಿಯೂರು ತಾಲ್ಲೂಕಿನಲ್ಲಿ ಮತ್ತು ಸಿರಾತಾಲ್ಲೂಕಿನಲ್ಲಿ ಒಟ್ಟು 3,000 ಎಕರೆ ಸಾಗುವಳಿ ಆಗಬೇಕು ಅದು ಹೋಗಿ ಈಗ 2,000 ಎಕರೆಗೆ ಆಗುತ್ತಾ ಇದೆ. ಇದು ಸರ್ಕಾರದವರು ಈ ಕ್ಷಾಮ ಪ್ರದೇಶದಲ್ಲಿ ಮಾಡುತ್ತಾ ಇರತಕ್ಕ ಉಪಕಾರವೆ ಎಂದು ನಾನು ಕೇಳಬೇಕಾಗಿದೆ. ಮೂರು ಸಾವಿರ ಎಕರೆಯಲ್ಲಿ 1,800 ಎಕರೆ ಸಿರಾ ತಾಲ್ಲೂಕಿನಲ್ಲಿ, 1,200 ಎಕರೆ ಹಿರಿಯೂರು ತಾಲ್ಲೂಕಿನಲ್ಲಿ ಸಾಗುವಳಿ ಆಗುತ್ತದೆ ಎಂದು ಅಂದಾಜಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ಆಗಿದೆ. ಮೇಜರ್ ಕೆರೆಗಳಲ್ಲಿ ಉದಾಹರಣೆಗೆ ಅನೇಕ ಕೆರೆಗಳನ್ನು ಹೇಳಬಹುದು ಇವುಗಳ ಕ್ಯಾಚ್‌ಮೆಂಟ್ ಏರಿಯಾ ಬಹಳ ದೂರದಲ್ಲಿರುವುದರಿಂದ ಅಕ್ಟೋಬರ್ ತಿಂಗಳಿನಲ್ಲಿ ಚೆತ್ತಮಳೆ ವಿಶೇಷವಾಗಿ ಬಂದಾಗ ತುಂಬುತ್ತವೆ. ಇಂತಹ ದೊಡ್ಡ ಕೆರೆಗಳನ್ನಾದರೂ ಉಠಾವಣೆ ಮಾಡಿರಿ ಎಂದರೆ ಮಾಡಿಲ್ಲ. 8-10 ವರ್ಷಗಳಿಂದ ಹೇಳುತ್ತಾ ಇದ್ದೇವೆ. ಎಕ್ಸಿಕ್ಯೂಟೀವ್ ಇಂಜನಿಯರು, ಸೂಪರಿಟೆಂಡಿಂಗ್ ಇಂಜನಿಯರು, ಅಸಿಸ್ಟೆಂಟ್ ಇಂಜನಿಯರು ಇವರೆಲ್ಲಾ ನಮ್ಮನೆ ನೋಡಿಕೊಂಡು ಹೋಗುತ್ತಾರೆಯೇ ಹೊರತು ಕೆಲಸ ಮಾತ್ರವಿನ್ನೂ ಆಗಿಲ್ಲ. ಹಿಂದೆ P.W.D. ಮಂತ್ರಿಗಳಾಗಿದ್ದ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಯಥೇಚ್ಛವಾಗಿ ಹಣ ಕೊಟ್ಟಿದ್ದೇವೆ, ಮೈನರ್ ಇರಿಗೇಷನ್ ಕೆಲಸ ಜಾಗ್ರತೆ ಮಾಡಿಸುತ್ತೇವೆ ಎಂದು ಉತ್ತರ ಕೊಟ್ಟಿದ್ದರು. ನಾವು ಬಹಳ ನಂಬಿಕೆ ಇಟ್ಟುಕೊಂಡಿದ್ದೆವು. ಇದುವರೆಗೂ ಒಂದು ಕೆಲಸವನ್ನೂ ತೆಗೆದುಕೊಂಡಿಲ್ಲ. ಈ ರೀತಿ ಬಾಯಲ್ಲಿ ಒಂದು ರೀತಿ ಹೇಳುವುದು ಕಾರ್ಯತಃ ಯಾವುದನ್ನೂ ಮಾಡದೇ ಇರುವುದನ್ನು ನೋಡಿ ಬಹಳ ನಿರಾಶಾಭಾವನೆ ಬರುತ್ತಾ ಇದೆ. ಈ ರೀತಿ ಆಗುತ್ತಾ ಇರುವುದು ದೇಶದ

(ಶ್ರೀ ಟಿ. ತಾರೇಗೌಡ)

ಹಿತದೃಷ್ಟಿಯಿಂದ ಮತ್ತು ಜನರ ಹಿತದೃಷ್ಟಿಯಿಂದ ಚೆನ್ನಾಗಿ ಕಾಣುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಈ ರೀತಿ ಟೀಕೆ ಮಾಡುತ್ತಾರಲ್ಲಾ ಎಂದು ಸ್ವಲ್ಪ ಮನಸ್ಸಿನಲ್ಲಿ ನೋವು ಇದೆ. ದೇಶದ ಹಿತದೃಷ್ಟಿಯಿಂದ ಅವರು ಈ ಟೀಕೆಯನ್ನು ಸ್ವಾಗತಮಾಡಬೇಕು. ಜನರ ಕಷ್ಟನಿವಾರಣೆ ಮಾಡುವುದಕ್ಕೆ ಅವರು ಮನಸ್ಸು ಮಾಡಿ ಶೀಘ್ರವಾಗಿ ಕಾರ್ಯಕ್ರಮವನ್ನು ತೆಗೆದು ಕೊಂಡು ಶಾಶ್ವತವಾದ ಪರಿಹಾರವನ್ನು ಒದಗಿಸಿಕೊಡ ಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಈ ಪ್ರದೇಶಗಳಲ್ಲಿ ಜನರಿಗೆ ಸೌಲಭ್ಯ ಒದಗಬೇಕಾದರೆ ಐದು ಇರಾಖೆಗಳವರು ಸಹಕಾರ ನೀಡಬೇಕು. ಯಾವುವೆಂದರೆ ಸಹಕಾರ ಇರಾಖೆಯವರು ವ್ಯವಸಾಯದ ಇರಾಖೆಯವರು, ಪಬ್ಲಿಕ್ ವರ್ಕ್ಸ್ ಇರಾಖೆಯವರು ಮತ್ತು ಹಣಕಾಸಿನ ಇರಾಖೆಯವರು. ಮಾನ್ಯ ಹಣಕಾಸಿನ ಮಂತ್ರಿಗಳಾದ ಮರಿಯಪ್ಪನವರು ದುಡ್ಡಿನ ವಿಚಾರ ಬಂತೆಂದರೆ ಕೊಕ್ಕೆಹಾಕುತ್ತಾರೆ. ಆ ರೀತಿ ಮಾಡದೆ ಸ್ವಲ್ಪ ಉದಾರ ಮನಸ್ಸು ತೋರಿಸ ಬೇಕು. ತುಮಕೂರು ಜಿಲ್ಲೆಯಲ್ಲಿ ಹತ್ತು ತಾಲ್ಲೂಕು ಗಳುಇವೆ. ಅವರಲ್ಲಿ ಐದಾರು ತಾಲ್ಲೂಕುಗಳು ಬಹಳ ಕಷ್ಟ ದೆಶೆಯಲ್ಲಿವೆ. 80 ಸಾವಿರ ರೂಪಾಯಿ ಕೆಲಸ ಮಾಡಿಸಬೇಕೆಂದು ನಿರ್ಣಯ ಮಾಡಿದ್ದೇವೆ. ಆದರೆ ಇದುವರೆಗೂ ಕೆಲಸಮಾತ್ರ ಏನೂ ಆಗುತ್ತಿಲ್ಲ. ತತ್ಕಾಪಿ ಸಿರಾತಾಲ್ಲೂಕಿನಲ್ಲಿಂತೂ ಒಂದು ಕೆಲಸವನ್ನೂ ತೆಗೆದು ಕೊಂಡಿಲ್ಲ. ಆದ್ದರಿಂದ ಅಲ್ಲಿ ಮೈನರ್ ಇರಿಗೇಷನ್ ಕೆಲಸಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು; ಮತ್ತು ಅಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಹೆಚ್ಚಾಗಿ ಸಬ್ಸಿಡಿ ಕೊಟ್ಟು ಆ ಬಾವಿಗಳಿಂದ ವ್ಯವಸಾಯಕ್ಕೆ ನೀರು ಹಾಯಿಸಲು ಅನುಕೂಲವಾಗುವಂತೆ ವಿದ್ಯುಚ್ಛಕ್ತಿಯನ್ನೊದಗಿಸಲು ಏರ್ಪಾಡು ಮಾಡಿಕೊಡಬೇಕು.

6 P.M.

[MR. SPEAKER in the Chair]

ಮಂತ್ರಿಗಳನ್ನು ಕೇಳಿದರೆ ಈಗ ಅಗ್ರಿಮೆಂಟಾಗಿದೆ, ಆದುದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳು ತ್ತಾರೆ. ಹಾಗೆ ಅಗ್ರಿಮೆಂಟ್ ಆಗಿದ್ದರೂ ಕೂಡ ಅದನ್ನು ಬದಲಾಯಿಸಲು ಸಾಧ್ಯವಿದೆ! ವ್ಯವಸಾಯ ಗಾರನ ಜಮೀನಿನ ಮೇಲೆ ಸೀಲಿಂಗ್ ತರುವುದಕ್ಕೆ fundamental rights ಎಲ್ಲಿ ಹೋಯಿತು. ಹಿಂದೆ ಅಗ್ರಿಮೆಂಟ್ ಆಗಿದ್ದರೆ ಕೈಗಾರಿಕೆಗಳಿಗೆ ಮತ್ತು ಹಿಂದೆ ಕೊಚ್ಚಿರುವವರಿಗೆ ಮಾತ್ರ ರಾತ್ರಿ ಹಗಲೂ ವಿದ್ಯುಚ್ಛಕ್ತಿಯನ್ನು ಕೊಡುತ್ತಾರೆ. ಹೊಸದಾಗಿ ವಿದ್ಯುತ್ತನ್ನು ತೆಗೆದುಕೊಳ್ಳುವವರಿಗೆ ಮಾತ್ರ ರಾತ್ರಿಯವೇಳೆ ಮಾತ್ರ ಉಪಯೋಗಿಸಬೇಕೆಂದು ಒತ್ತಾಯಮಾಡು ತ್ತಾರೆ. ಇದು ನ್ಯಾಯವೇ! ಈ ವ್ಯತ್ಯಾಸವನ್ನು ಹೋಗಲಾಡಿಸಬೇಕು. ಒಂದು ವೇಳೆ ಹೊಸದಾಗಿ ವಿದ್ಯುತ್ತನ್ನು ಪಡೆಯಲು ಮುಂದೆ ಬರುವವರು ರಾತ್ರಿಯೂ ಹೊತ್ತೇ ತೆಗೆದುಕೊಳ್ಳುತ್ತೇವೆ, ನಮಗೆ ವಿದ್ಯುತ್ತನ್ನು ಕೊಡಿ ಎಂದರೆ, ಆಗ ಏನು ಮಾಡು ತ್ತಾರೆ? ವಿದ್ಯುಚ್ಛಕ್ತಿ ಇರಾಖೆಯಲ್ಲಿ ಒಂದು ನಣ್ಣ ಕೆಲಸವಾಗಬೇಕಾದರೂ ಸಹ ಕೆಳಮಟ್ಟದಲ್ಲಿ ಬಹಳ ತೊಡಕುಗಳಿವೆ ಅನೇಕರಿಗೆ ಕೈ ಕಚ್ಚುತ್ತಿದೆ. ಇಂಥ ರೊಪಮೋಷಗಳನ್ನೆಲ್ಲ ಇರಾಖೆಯಲ್ಲಿ ನರಿಪಡಿಸ ಬೇಕು.

ರೈತಾಪಿ ಜನಗಳಿಗೆ ವ್ಯವಸಾಯಮಾಡಿ ಹೆಚ್ಚಾಗಿ ಬೆಳೆ ಬೆಳೆಯಬೇಕೆಂದರೆ ಹಣದ ಅಭಾವವಿರುತ್ತದೆ. ಸೊಸೈಟಿಗಳನ್ನು ಹೆಚ್ಚುಮಾಡಿ ಅವುಗಳ ಮುಖಾಂತರ ಅಲ್ಪ ಕಾಲಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲಗಳನ್ನು ಕೊಡಬೇಕು; ಮತ್ತು ಅನೇಕರಿಗೆ ಬೇರೆ ಸಾಲಗಳಿರುವುದರಿಂದ ಅದನ್ನು ತೀರಿಸಲು ಸಹಾಯ ವಾಗುವಂತೆ ದೀರ್ಘಾವಧಿ ಸಾಲಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕು. ಸಹಕಾರ ಇಲಾಖೆಯವರು ದಾಯಲ್ಲಿ ಎಷ್ಟೋ ಹೇಳುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಸೊಸೈಟಿಗಳೇ ಇಲ್ಲ. ಅದರಲ್ಲಿ ಮುಖ್ಯ ವಾಗಿ ಸಿರಾ, ಮಧುಗಿರಿ, ಪಾವಗಡ, ಕೊರಟಗೆರೆ, ಗುಬ್ಬಿ ತಾಲ್ಲೂಕುಗಳಲ್ಲಿ ಸೊಸೈಟಿಗಳು ಹೆಚ್ಚಾಗಿಲ್ಲ. ಅಲ್ಲಿರುವ ಅನೇಕ ಸೊಸೈಟಿಗಳು ಬಹಳ ಹೀನಾವಸ್ಥೆ ಯಲ್ಲಿವೆ. ಅವುಗಳಿಗೆ ಉತ್ತೇಜನ ಕೊಡಲು ಅವುಗಳನ್ನು ರಿವೈವ್ ಮಾಡಿ ಆ ಸೊಸೈಟಿಗಳ ಮುಖೇನ ಆ ಪ್ರದೇಶದ ಜನರಿಗೆ ಅಲ್ಪಾವಧಿ, ಮಧ್ಯಮಾ ವಧಿ ಮತ್ತು ದೀರ್ಘಾವಧಿ ಸಾಲಗಳು ದೊರೆಯು ವಂತೆ ಸೌಲಭ್ಯಗಳನ್ನು ಜಾಗ್ರತೆ ಮಾಡಬೇಕು. ಈ ರೀತಿ ಸೌಲಭ್ಯಗಳನ್ನು ಕಲ್ಪಿಸಿ, ಮಲೆನಾಡಿನ ಅಭಿವೃದ್ಧಿ ಗಾಗಿ ಯಾವ ರೀತಿಯಲ್ಲಿ ಸರ್ಕಾರದವರು ಒಂದು ಶಾಶ್ವತವಾದ ಮಲೆನಾಡು ಅಭಿವೃದ್ಧಿ ಬೋರ್ಡ್ ಎಂದು ಮಾಡಿದ್ದಾರೆಯೋ ಅದೇ ರೀತಿ ಈ ಕ್ಷಾಮ ಪ್ರದೇಶ ಅಥವಾ ಬರಗಾಲ ಪ್ರದೇಶವಾದ ಉತ್ತರ ಕರ್ನಾಟಕದ ಬಿಜಾಪುರ, ಬದರೆ, ಬೆಳಗಾಂ ಜಿಲ್ಲೆ ಗಳು, ಚಿತ್ರದುರ್ಗ, ತುಮಕೂರು, ಕೋಲಾರ ಮತ್ತೆರೆ ಜಿಲ್ಲೆಗಳ ಪ್ರದೇಶಕ್ಕೆ ಒಂದು ಶಾಶ್ವತವಾದ ಬೋರ್ಡನ್ನು ಮಾಡಿ, ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಕೈಗೊಳ್ಳಲು ಒಂದು ಯೋಜನೆ ಯನ್ನು ಶೀಘ್ರವಾಗಿ ಮಾಡಿ ಉಪಕಾರ ಮಾಡಬೇ ಕೆಂದು ತಿಳಿಸಿ, ನಿರ್ಣಯವನ್ನು ಸಮರ್ಥಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

Sri C. M. ARUMUGHAM (Kolar Gold Fields).—Sir, kindly extend the time for discussion till 7 o'clock.

Mr. SPEAKER.—But this can be continued next time on the next available day. Under the Rules, it will have to be taken up on the next non-official day.

Sri C. K. RAJAIAH SETTY (Chicknaikanahalli).—Do you assure this House that this Housewill be adjourned?

Mr. SPEAKER.—I can assure one thing that I will only announce that this House is going to be adjourned.

HALF-HOUR DEBATE ON QUESTION No. 2157

Re: Supply of agricultural Implements to Tiptur Taluk.

*ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ (ತಿಪಟೂರು).—ಸ್ವಾಮಿ, ತಿಪಟೂರು ತಾಲ್ಲೂಕಿಗೆ ವ್ಯವಸಾಯೋಪಕರಣ ಗಳ ಪೂರೈಕೆಯ ಬಗ್ಗೆ ನುಮಾರು ಒಂದು ವರ್ಷದ ಹಿಂದೆ indent ಮಾಡಿದ್ದರೂ ಕೂಡ ವರ್ಷಾನುಗಟ್ಟಲೆ ಯಾಗಿದ್ದರೂ ಕಳುಹಿಸದೆ ಬಹಳ ತೊಂದರೆಯಾಗಿದೆ